ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2015
ಬೆಲೆ ರೂ. 1

## ರಾಜಧಾನಿಯಲ್ಲಿ ಕರ್ನಾಟಕ ರಾಜ್ಯೋತ್ಸವದ ಸಂಭ್ರಮ




ಅಗಲಿದ
ಬಸವರಾಜ ಮೇಟಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 2
ನವೆಂಬರ್ 2015, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
9958807225
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟೀಲ್
9650182413
ಬಾಬುರಾಜ್ ಪೂಜಾರಿ
9818807696
ಎಸ್. ಪರಮೇಶ್
9015332380
ತ್ಯಾಗೇಶ್ ಮೂರ್ತಿ
9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

## ನೇರ ಮಾತು

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡದ ಪೀಠವೊಂದು ಆರಂಭವಾಗಬೇಕೆಂಬ ವಿಚಾರದ ಬೀಜ ಅಂಕುರಿಸಿದ್ದು ಅಂದಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು ಅವರು 2011ರಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಭಾಗವಹಿಸಿದ್ದ ಒಂದು ವಿಚಾರ ವಿನಿಮಯ ಕಾರ್ಯಕ್ರಮದ ಸಂದರ್ಭದಲ್ಲಿ.

2013ರಲ್ಲಿ ನಾವು ಈ ಕುರಿತು ಕಾರ್ಯಾರಂಭ ಮಾಡಿ ಪ್ರಸ್ತಾವನೆಗೆ ಚಾಲನೆ ನೀಡಿದೆವು. ಪೀಠ ಸ್ಥಾಪನೆಯ ಬಗ್ಗೆ ರೂಪುರೇಷೆ, ಸ್ವರೂಪ, ಅಂದಾಜು ಖರ್ಚು ಮುಂತಾದವುಗಳಿಗೆ ಸಂಬಂಧಿಸಿದಂತೆ 2014ರಲ್ಲಿ ಸಂಘದಿಂದ ಡಾ. ಪುರುಷೋತ್ತಮ ಬಿಳಿಮಲೆ, ಡಾ. ಟಿ.ಎಸ್. ಸತ್ಯನಾಥ್, ಡಾ. ವೆಂಕಟಾಚಲ ಹೆಗಡೆ, ಶ್ರೀ ಪಿ.ಸಿ. ಶ್ರೀನಿವಾಸ್ ಅವರುಗಳನ್ನೊಳಗೊಂಡ ಒಂದು ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿ ಕಾರ್ಯೋನ್ಮುಖವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್, ಇಲಾಖೆಯ ನಿರ್ದೇಶಕ ಶ್ರೀ ದಯಾನಂದ ಹಾಗೂ ಜೆ.ಎನ್.ಯು.ವಿ.ನ ರೆಕ್ಟರ್ ಶ್ರೀಮತಿ ಸುಧಾ ಪೈ ಇವರುಗಳನ್ನು ಸಂಪರ್ಕಿಸಿ ಹತ್ತಾರು ಬಾರಿ ಸಭೆ ಸೇರಿ ಚರ್ಚಿಸಿದ ನಂತರ ಪೀಠ ಸ್ಥಾಪನೆಗೆ ಒಂದು ರೂಪ ಬಂದಿತು. ಈ ಮಧ್ಯೆ ಶ್ರೀಮತಿ ಸೋನಿಯಾ ಗಾಂಧಿ, ಕೇಂದ್ರ ಮಾಜಿ ಸಚಿವರುಗಳಾದ ಡಾ.ಎಂ. ವೀರಪ್ಪ ಮೊಯಿಲಿ, ಶ್ರೀ ಆಸ್ಕರ್ ಫರ್ನಾಂಡಿಸ್, ಹಾಗೂ ಕೇಂದ್ರ ಸಚಿವರಾದ ಶ್ರೀ ಜಿ.ಎಂ. ಸಿದ್ದೇಶ್ವರ, ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ವಂದನಾ ಗುರ್ನಾನಿ, ಕರ್ನಾಟಕದ ಎಲ್ಲಾ ಲೋಕಸಭಾ ಸದಸ್ಯರುಗಳು ಹಾಗೂ ಕನ್ನಡದ ಹಲವಾರು ಮುಖ್ಯ ಬರಹಗಾರರಿಗೆ ಈ ಪೀಠವನ್ನು ಕೂಡಲೇ ಸ್ಥಾಪಿಸುವಂತೆ ಕರ್ನಾಟಕ ಸರಕಾರವನ್ನು ಒತ್ತಾಯಿಸಬೇಕೆಂದು ಮನವಿಯನ್ನು ಸಲ್ಲಿಸಲಾಯಿತು. ಜೊತೆಗೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯವರನ್ನು ಸಂಸದರಾದ ಶ್ರೀ ಆಸ್ಕರ್ ಫರ್ನಾಂಡಿಸ್, ಶ್ರೀ ಧ್ರುವ ನಾರಾಯಣ, ಶ್ರೀ ಬಿ.ಕೆ. ಹರಿಪ್ರಸಾದ್ ಮತ್ತು ಸಂಘದ ಪದಾಧಿಕಾರಿಗಳ ನಿಯೋಗ ಭೇಟಿಯಾಗಿ ಮನವಿ ಸಲ್ಲಿಸಿತ್ತು. ಈ ಎಲ್ಲ ಪ್ರಯತ್ನಗಳಿಂದ ಕಳೆದ ವರ್ಷ 2014ರ ನವೆಂಬರ್‌ನಲ್ಲಿ ಕರ್ನಾಟಕ ಸರಕಾರ ಆದೇಶ ನೀಡಿ ಪೀಠ ಸ್ಥಾಪನೆಗೆ ರೂ. 43,00,000/– ಲಕ್ಷ ಅನುದಾನವನ್ನು ಮಂಜೂರು ಮಾಡಿತು.

ಇದು ದೆಹಲಿ ಕರ್ನಾಟಕ ಸಂಘಕ್ಕೆ ವಿಶೇಷವಾಗಿ ದೆಹಲಿ ಕನ್ನಡಿಗರಿಗೆ 2014ರ ರಾಜ್ಯೋತ್ಸವದ ಮಹತ್ವದ ಕೊಡುಗೆಯಾದರೆ, ಅಧ್ಯಯನ ಪೀಠದ ಮುಖ್ಯಸ್ಥರಾಗಿ ನೇಮಕಗೊಂಡ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ, ಡಾ. ಪುರುಷೋತ್ತಮ ಬಿಳಿಮಲೆಯವರ ನೇತೃತ್ವದಲ್ಲಿ ನವೆಂಬರ್ 26ರಂದು ನಡೆಯಲಿರುವ ಅಧ್ಯಯನ ಪೀಠದ ಉದ್ಘಾಟನಾ ಸಮಾರಂಭವು ಈ ಬಾರಿಯ ರಾಜ್ಯೋತ್ಸವದ ಸಂದರ್ಭ ರಾಜಧಾನಿ ದೆಹಲಿಯಲ್ಲೊಂದು ಕನ್ನಡದ ಚಾರಿತ್ರಿಕ ಘಟನೆಯಾಗಲಿದೆ. ಅಂದು ಎಲ್ಲ ದೆಹಲಿಯ ಕನ್ನಡಿಗರು ಈ ಸಮಾರಂಭದಲ್ಲಿ ಭಾಗವಹಿಸಿ ಕನ್ನಡವನ್ನು ರಾಷ್ಟ್ರದ ರಾಜಧಾನಿಯಲ್ಲಿ ಇನ್ನುಷ್ಟು ಬಲಿಷ್ಠಗೊಳಿಸೋಣ ಎಂದು ತಮ್ಮಲ್ಲಿ ವಿನಂತಿಸುತ್ತಾ ತಮಗೆಲ್ಲಾ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್, ಇಲಾಖೆಯ ನಿರ್ದೇಶಕ ಶ್ರೀ ದಯಾನಂದ, ಸಂಸದರಾದ ಶ್ರೀ ಆಸ್ಕರ್ ಫರ್ನಾಂಡಿಸ್, ಶ್ರೀ ಧ್ರುವ ನಾರಾಯಣ, ಶ್ರೀ ಬಿ.ಕೆ. ಹರಿಪ್ರಸಾದ್‌ರವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪೀಠ ಆರಂಭಗೊಳ್ಳಲು ಸಹಕರಿಸಿದ ಪತ್ರಕರ್ತರು ಹಾಗೂ ಮಾಧ್ಯಮ ಸ್ನೇಹಿತರು, ಕನ್ನಡದ ಬರಹಗಾರರು ಎಲ್ಲರಿಗೂ ಸಹ ಅನಂತ ಧನ್ಯವಾದಗಳು.

ಸಂಘದ ಆವರಣದಲ್ಲೇ ಈ ಬಾರಿ ಅತ್ಯಂತ ವ್ಯವಸ್ಥಿತವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ದೆಹಲಿ ಕರ್ನಾಟಕ ಸಂಘದ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿದ ಹೆಮ್ಮೆ ನನಗಿದೆ. ನನ್ನನ್ನು ಪ್ರೀತಿಯಿಂದ ಮತ್ತೊಂದು ಬಾರಿಗೆ ಅಧ್ಯಕ್ಷನಾಗಿ ಆಯ್ಕೆ ಮಾಡಿದ್ದೀರಿ. ಮತ ನೀಡಿ ಆಯ್ಕೆ ಮಾಡಿದ ತಮಗೆಲ್ಲಾ ನಮ್ಮ ಆತ್ಮೀಯ ಕೃತಜ್ಞತೆಗಳು. ಈಗಾಗಲೇ ವಿಶೇಷ ಆಹ್ವಾನಿತರನ್ನು ಸಮಿತಿಗೆ ಆಹ್ವಾನಿಸಿ ಮುಂದಿನ ಕಾರ್ಯ ಯೋಜನೆಗಳತ್ತ ಹೆಜ್ಜೆ ಇಟ್ಟಿದ್ದೇವೆ. ಈ ವರ್ಷದ ನಮ್ಮ ಕಾರ್ಯಕಾರಿ ಸಮಿತಿ ಅತ್ಯಂತ ಶ್ರಮ ವಹಿಸಿ ಕೆಲಸ ಮಾಡಿ ವ್ಯವಸ್ಥಿತವಾದ ಆಡಳಿತವನ್ನು ಮಾಡುವ ಪ್ರಯತ್ನ ಮಾಡುತ್ತೇವೆ. ಜೊತೆಗೆ ಸಂಪೂರ್ಣ ಕರ್ನಾಟಕವನ್ನು ಪ್ರತಿನಿಧಿಸುವ ಅತ್ಯುತ್ತಮ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಕಲ್ಪ ನಮ್ಮದು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳೆ, ಕಾರ್ಯಕಾರಿ ಸಮಿತಿಯ 2015–17ರ ಅವಧಿಗೆ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿದ್ದೀರಿ ಇದಕ್ಕಾಗಿ ತಮಗೆ ಅನಂತ ಅನಂತ ಧನ್ಯವಾದಗಳು. ಕರ್ನಾಟಕ ರಾಜ್ಯೋತ್ಸವ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು.

ಕಳೆದ ಎರಡು ವರ್ಷಗಳು ತಮಗೆ ಉತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದ್ದೇವೆ. ಈ ಬಾರಿಯು ಸಹ ಇನ್ನೂ ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡುತ್ತೇವೆ. ಈ ಕಾರ್ಯಕಾರಿ ಸಮಿತಿ ಇನ್ನೂ ತುಂಬಾ ಕೆಲಸಗಳನ್ನು ಮಾಡಬೇಕಾಗಿದೆ. ಮುಖ್ಯವಾಗಿ ದೆಹಲಿಯಲ್ಲಿಯ ಎಲ್ಲ ಕನ್ನಡಿಗರು ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು. ಸಂಘದ ಆಜೀವ ಸದಸ್ಯತ್ವವನ್ನು ನೀಡುವುದು, ಸಂವಿಧಾನ ತಿದ್ದುಪಡಿ ಮಾಡುವುದು, ರಾಷ್ಟ್ರ ರಾಜಧಾನಿಯಲ್ಲಿ ಕನ್ನಡವನ್ನು ಇನ್ನಷ್ಟು ಬಲಪಡಿಸುವುದು ನಮ್ಮ ಧ್ಯೇಯವಾಗಿದೆ. ಕನ್ನಡ ಕಲಿಕೆ ಮತ್ತು ಭರತ ನಾಟ್ಯ, ಸಂಗೀತ ಮುಂತಾದ ತರಬೇತಿಗಳನ್ನು ಆರಂಭಿಸುವ ಯೋಜನೆಯಿದೆ.

ಈ ಬಾರಿಯ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆ ಸಂಘದ ಆವರಣದಲ್ಲಿ ಎರಡು ದಿನಗಳು ನಡೆದಿದ್ದು, ತಮ್ಮೆಲ್ಲರ ಸಹಕಾರದಿಂದ ತುಂಬಾ ಯಶಸ್ವಿಯಾಗಿ ನಡೆದಿದೆ. ಮೊದಲು ದೆಹಲಿ ಕನ್ನಡ ಶಾಲೆಯಲ್ಲಿ ನಡೆಯುತ್ತಿತ್ತು. ತುಂಬಾ ಖರ್ಚು ವೆಚ್ಚಗಳಾಗುತ್ತಿತ್ತು, ಕಳೆದ ಬಾರಿಯ ವಾರ್ಷಿಕ ಸರ್ವ ಸದಸ್ಯರ ಸಭೆಗೆ ಸುಮಾರು 8ಲಕ್ಷ ರೂಪಾಯಿಗಳು ಖರ್ಚಾಗಿತ್ತು. ಆದರೆ ಈ ಬಾರಿಯ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆಗೆ 4 ಲಕ್ಷ 86 ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಿದೆ. ಸುಮಾರು 3.5 ಲಕ್ಷ ರೂಪಾಯಿಗಳು ಸಂಘಕ್ಕೆ ಉಳಿತಾಯವಾಗಿದೆ. ಚುನಾವಣೆ ಪ್ರಕ್ರಿಯೆಯಲ್ಲಿ ಶ್ರಮಿಸಿದ ಸಂಘದ ಸಿಬ್ಬಂದಿಗಳಿಗೂ ಹಾಗು ಚುನಾವಣಾ ಅಧಿಕಾರಿಗಳಾದ ಶ್ರೀ ಪಿ.ಎಸ್. ಶೆಟ್ಟಿ ಮತ್ತು ತಂಡಕ್ಕೆ ಹೃದಯಪೂರ್ವಕ ಧನ್ಯವಾದಗಳು.

ನವೆಂಬರ್ 21ರಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ವಾರ್ತಾ ಮತ್ತು ಪ್ರಚಾರ ಇಲಾಖೆ ಮತ್ತು ದೆಹಲಿ ಕರ್ನಾಟಕ ಸಂಘದ ಜೊತೆಗೂಡಿ ನಡೆಯಲಿದೆ. ಬೆಂಗಳೂರಿನಿಂದ ನಮ್ಮನ್ನು ನಗಿಸಲು ಹೆಸರಾಂತ ರಿಚರ್ಡ್ ಲೂಯಿಸ್ ತಂಡ ಮತ್ತು ಸಂಗೀತ ಕಾರ್ಯಕ್ರಮಕ್ಕೆ ಶ್ರೀ ರಾಮಚಂದ್ರ ಹಡಪದ್ ಅವರ ತಂಡ ಆಗಮಿಸಲಿದೆ.

ನವೆಂಬರ್ 29ರಂದು ಸಂಘದ ರಾಜ್ಯೋತ್ಸವ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ವಿಶಿಷ್ಟ ಕನ್ನಡಿಗ ಪಶಸ್ತಿ ಪ್ರಧಾನ ಮತ್ತು ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

### 21 ನವೆಂಬರ್ 2015 ಶನಿವಾರ ಸಾಯಂಕಾಲ : 4.00 ಗಂಟೆಗೆ

**ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಯೋಗದೊಂದಿಗೆ 60ನೇ ರಾಜ್ಯೋತ್ಸವ ಆಚರಣೆ ಶ್ರೀ ರಿಚರ್ಡ್ ಲೂಯಿಸ್ ಮತ್ತು ತಂಡದಿಂದ ನಗೆಹಬ್ಬ ಮತ್ತು ಶ್ರೀ ರಾಮಚಂದ್ರ ಹಡಪದ್ ಅವರಿಂದ ಸಂಗೀತ ಕಾರ್ಯಕ್ರಮ**

### 29 ನವೆಂಬರ್ 2015 ಭಾನುವಾರ ಸಾಯಂಕಾಲ : 4.00 ಗಂಟೆಗೆ

**ದೆಹಲಿ ಕರ್ನಾಟಕ ಸಂಘದ ರಾಜ್ಯೋತ್ಸವ ಆಚರಣೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮತ್ತು ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು**

## ಜಾನಪದ ಸಮೂಹ ನೃತ್ಯ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘವು ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸ್ಥಳೀಯ ಕನ್ನಡ ಕಲಾವಿದರಿಂದ ಸಮೂಹ ಜಾನಪದ ನೃತ್ಯ ಕಾರ್ಯಕ್ರಮವನ್ನು 29 ನವೆಂಬರ್ 2015ರಂದು ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

ದೆಹಲಿ ಪರಿಸರದ ಎಲ್ಲ ಕನ್ನಡ ಸಂಘ ಸಂಸ್ಥೆಗಳು ಇದರಲ್ಲಿ ಪಾಲ್ಗೊಳ್ಳಬಹುದು. ಜಾನಪದ ನೃತ್ಯ 'ನಮ್ಮ ಕರ್ನಾಟಕ' – ಕರ್ನಾಟಕದ ಸಂಸ್ಕೃತಿ, ಕಲೆ ಇವುಗಳನ್ನು ಬಿಂಬಿಸುವುದಾಗಿರಬೇಕು. ಪ್ರದರ್ಶನ ನೀಡಿದ ಪ್ರತಿ ತಂಡಕ್ಕೆ ರೂ. 5,000/–ಗಳ ಪ್ರೋತ್ಸಾಹ ಧನ ನೀಡಲಾಗುವುದು. ಆಸಕ್ತಿಯುಳ್ಳವರು ನವೆಂಬರ್ 18ರ ಒಳಗಾಗಿ ಸಂಘದ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸತಕ್ಕದ್ದು.

ಪ್ರತಿ ತಂಡದಲ್ಲಿ ಕನಿಷ್ಠ 6 ಸದಸ್ಯರಿರಬೇಕು.

*ಪ್ರಧಾನ ಕಾರ್ಯದರ್ಶಿ*

## ಸಂಘದ ಸಭಾಂಗಣದಲ್ಲಿ

### 15 ನವೆಂಬರ್ 2015 ಭಾನುವಾರ ಸಂಜೆ : 5.00 ಗಂಟೆಗೆ

**'ದಿನಕರ', ನವದೆಹಲಿ ಪ್ರಸ್ತುತ ಪಡಿಸುವ ಶ್ರೀ ಶಿವಾನಂದ ಇಂಗಳೇಶ್ವರ ನಿರ್ದೇಶನದ ಡಾ. ಲೋಹಿತ್ ನಾಯ್ಕರ, ಧಾರವಾಡ, ರಚಿತ ಎರಡು ನಾಟಕಗಳು ಕೋರ್ಟ್ – ಮಾರ್ಷಲ್ ಮತ್ತು ನಾ ಬದುಕಲಿಕ್ಕೆ ಒಲ್ಲೆಪಾ**

### 28 ನವೆಂಬರ್ 2015 ಶನಿವಾರ ಸಂಜೆ : 4.00 ಗಂಟೆಗೆ

**ಕೊಂಡಜ್ಜಿ ಬಸಪ್ಪ ಜನ್ಮ ಶತಮಾನೋತ್ಸವ ಸಮಾರಂಭ ಮತ್ತು ಶ್ರೀ ಬಿ.ಎಸ್. ಲಿಂಗದೇವರು ನಿರ್ದೇಶನದ ಕನ್ನಡ ಚಲನಚಿತ್ರ ನಾನು ಅವನಲ್ಲ. . . ಅವಳು**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ನವೆಂಬರ್, 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ನವೆಂಬರ್, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29 ನವೆಂಬರ್, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 29, ನವೆಂಬರ್, 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 26104818**

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 2
ನವಂಬರ್ 2015

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

ಮುಖಪುಟ ಚಿತ್ರ
ಆನಂದ ಈಶ್ವರಪ್ಪ ಮುರಗೋಡ

## ಸಂಪಾದಕೀಯ

# ಕರ್ನಾಟಕ ಪರಂಪರೆಯ ಉತ್ಸವ

ಅಭಿಮತದ ಓದುಗರಿಗೆ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ನವಂಬರ್ ತಿಂಗಳ ಮೊದಲ ದಿನದ ಸಂಭ್ರಮ ಕರ್ನಾಟಕದಾದ್ಯಂತ ಮಾತ್ರವಲ್ಲದೇ ನಮ್ಮಂತೆ ಹೊರನಾಡಿನಲ್ಲಿರುವವರಿಗೂ ನಮ್ಮ ನಾಡು, ನುಡಿ, ಸಂಸ್ಕೃತಿ, ಪರಂಪರೆಯ ಕುರಿತು ಹಲವು ಕಾರ್ಯಕ್ರಮಗಳನ್ನು ನೀಡುವ ಮತ್ತು ಈ ವಿಚಾರಗಳ ಕುರಿತು ಚಿಂತನೆ ಮಾಡುವ ಸಮಯವಾಗಿದೆ. ಒಂದು ತಿಂಗಳಿಡೀ ನಡೆಯುವ ರಾಜ್ಯೋತ್ಸವವು ಕರ್ನಾಟಕದ ಪರಂಪರೆಯನ್ನು ಕನ್ನಡಿಗರಿಗೆ ಮಾತ್ರವಲ್ಲದೇ ಇತರ ಭಾಷಿಕರಿಗೂ ಹೆಮ್ಮೆಯಿಂದ ಪ್ರದರ್ಶಿಸುವ ಸಮಯವಾಗಿದೆ. ಕರ್ನಾಟಕ ಎಂಬ ಕಲ್ಪನೆಯು ನಮಗೆ ಬಹಳ ಹಿಂದಿನ ಇತಿಹಾಸ ಮತ್ತು ಸಾಹಿತ್ಯಗಳಲ್ಲಿ ದೊರಕುತ್ತದೆ. ಭೌಗೋಳಿಕವಾಗಿ ಒಂದು ರಾಜ್ಯವೆಂದು ಗುರುತಿಸಿರುವ ಪ್ರದೇಶವನ್ನು ಮೀರಿ ಕರ್ನಾಟಕವು ವಿಸ್ತಾರಗೊಂಡಿತ್ತು. ಇಂದು ಕೂಡಾ ಕೇರಳದ ಕಾಸರಗೋಡಿನಂತಹ ಅಪ್ಪಟ ಕನ್ನಡ ಮಾತಾಡುವ ಪ್ರದೇಶಗಳು ಕರ್ನಾಟಕ ರಾಜ್ಯದ ಭೌಗೋಳಿಕ ಪ್ರದೇಶದಿಂದ ಹೊರಗಿವೆ. ಅಂತೆಯೇ ಗೋವಾ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು ಮೊದಲಾದ ಗಡಿ ಪ್ರದೇಶವಲ್ಲದೇ ದೂರದ ನಾಡಾದ ಮುಂಬಯಿ, ದೆಹಲಿ, ಗುಜರಾತ್, ವಾರಾಣಾಸಿ ಮೊದಲಾದ ಕಡೆ ಕನ್ನಡಿಗರ ಜನಸಂಖ್ಯೆಯು ಅಪಾರವಾಗಿದ್ದು ಅಲ್ಲಿರುವವರೆಲ್ಲರೂ ಕರ್ನಾಟಕ ಪರಂಪರೆಯ ಅವಿಭಾಜ್ಯ ಅಂಗವಾಗಿರುತ್ತಾರೆ.

ಭಾರತದ ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯ ಪುನರ್‌ವಿಂಗಡನಾ ಆಯೋಗವು ನಿರ್ಣಯಿಸಿದಂತೆ 1956ರ ನವಂಬರ್ 1ರಂದು ವಿಶಾಲ ಮೈಸೂರು ರಾಜ್ಯದ ಉದಯವಾಯಿತು. ಆದರೆ ಈ ನಾಡಿಗೆ ಕರ್ನಾಟಕವೆಂದು 1973ರ ನವಂಬರ್ 1ರಂದು ನಾಮಕರಣವಾಯಿತು. ಕರ್ನಾಟಕವೆಂಬುದು ಹಲವು ಶತಮಾನಗಳ ಹಿಂದೆಯೇ ಇದ್ದಂತಹ ಒಂದು ಭಾಷಾ ಮತ್ತು ಭೌಗೋಳಿಕ ಕಲ್ಪನೆಯಾಗಿತ್ತು. ಹಾಗಾಗಿಯೇ ದೆಹಲಿಯಂತಹ ಹೊರನಾಡಿನಲ್ಲಿ ಕನ್ನಡಿಗರು ಒಂದಾಗಿ ತಮ್ಮ ಸಂಘಟನೆಯನ್ನು ಆರಂಭಿಸಿದಾಗ ಅದನ್ನು ದೆಹಲಿ ಕರ್ನಾಟಕ ಸಂಘ ಎಂದು ಕರ್ನಾಟಕವೆಂಬ ರಾಜ್ಯದ ಉದಯಕ್ಕಿಂತ ಮೊದಲೇ ನಾಮಕರಣ ಮಾಡಿದ್ದರು. ಕರ್ನಾಟಕ ಎಂಬ ಕಲ್ಪನೆಯನ್ನು ನಾವು ಕಾಣುವಾಗ ಅಲ್ಲಿ ಕೇವಲ ಕನ್ನಡ ಭಾಷೆಯ ಕುರಿತು ನಮಗಿರುವ ಅಭಿಮಾನವು ಮಾತ್ರ ಮುಖ್ಯವಾಗಿರದೇ ಕರ್ನಾಟಕದ ಭವ್ಯ ಪರಂಪರೆಗಳ ಕುರಿತು ಮತ್ತು ಮುಂದಿನ ದಿನಗಳಲ್ಲಿ ಕಾಣಬಹುದಾದ ಕರ್ನಾಟಕದ ಅಭ್ಯುದಯದ ಚಿತ್ರಣಗಳನ್ನೂ ನಾವು ಅರಿತು ಚಿಂತಿಸಬೇಕಾಗಿದೆ. ಆದುದರಿಂದ ಕರ್ನಾಟಕ ರಾಜ್ಯೋತ್ಸವವಾಗಿರುವ ನವಂಬರ್ ಒಂದು ಬರೇ ಕನ್ನಡದ ಹಬ್ಬವಾಗದೆ ಅದು ಕರ್ನಾಟಕದ ಸಮಗ್ರ ಸಂಸ್ಕೃತಿ ಪರಂಪರೆಯಾದ ನಾಡಿನ ನೆಲ, ಜಲ, ಕಲೆ, ಸಾಹಿತ್ಯವನ್ನು ಬಿಂಬಿಸುವ ಸಡಗರವಾಗಬೇಕು.

**ಅಗಲಿದ ಬಸವರಾಜ್ ಮೇಟಿ**

ಆಡಳಿತ ಮಂಡಳಿಯ ಒಳಗಿರಲಿ, ಹೊರಗಿರಲಿ ದೆಹಲಿ ಕರ್ನಾಟಕ ಸಂಘದ ಒಟ್ಟು ವ್ಯವಸ್ಥೆಯ ಕುರಿತು ಕಾಳಜಿ ಹೊಂದಿ ದೆಹಲಿಯ ತನ್ನ ಜೀವನದ ಪ್ರಮುಖ ಸಮಯವನ್ನು ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಯ ಕಡೆಗೆ ಮುಡುಪಾಗಿಟ್ಟ ಬಸವರಾಜ್ ಎಸ್. ಮೇಟಿ ಅವರು ಎಳೆ ವಯಸ್ಸಿನಲ್ಲಿ ಅಕಾಲವಾಗಿ ನಮ್ಮನ್ನಗಲಿದ್ದಾರೆ. ಮಾಜಿ ಅಧ್ಯಕ್ಷ ಕೆ.ಆರ್. ನಾಗರಾಜ್ ಅವರ ಗರಡಿಯಲ್ಲಿ ಪಳಗಿದ, ಸಂಘದ ಆಡಳಿತದಲ್ಲಿ ವಿಶಿಷ್ಟ ಪಾತ್ರವಹಿಸಿದ ಮೇಟಿ ಅವರ ನಿಧನ ಈ ಘಟ್ಟದಲ್ಲಿ ದಿಗ್ಭ್ರಮೆಯನ್ನು ಹುಟ್ಟಿಸಿದೆ. ಸಂಘದ ಆರ್ಥಿಕ ವ್ಯವಸ್ಥೆ ಮತ್ತು ಸಾಂವಿಧಾನಿಕ ನಿಯಮಗಳ ಪಾಲನೆಗಳ ಮೇಲೆ ಅತೀವ ನಿಗಾ ಇರಿಸಿ ಆಡಳಿತರೂಢ ತಂಡವನ್ನು ಸದಾ ಜಾಗ್ರತೆಯಿಂದ ಇರುವಂತೆ ಅವರು ಎಚ್ಚರಿಸುತ್ತಿದ್ದರು. ದೆಹಲಿ ಕರ್ನಾಟಕ ಸಂಘದಂತಹ ಸಂಸ್ಥೆಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ರಂಗದಲ್ಲಿ ಮಹತ್ವವಾದ ಕೆಲಸಗಳನ್ನು ಮಾಡುವಂತೆ ಆಡಳಿತದಲ್ಲಿಯೂ ಬಹಳಷ್ಟು ಸುದೃಡವಾಗಿ ಇರಬೇಕಾಗುತ್ತದೆ. ಅಪಾರ ಅಭಿಮಾನಿಗಳನ್ನು ಹೊಂದಿರುವ ಮೇಟಿಯವರ ಧನಾತ್ಮಕ ಕೊಡುಗೆಗಳು ಸಂಘದ ಬೆಳವಣಿಗೆಗೆ ಸಹಕಾರಿಯಾಗಲಿ. ಅಗಲಿದ ಮೇಟಿಯವರ ಆತ್ಮಕ್ಕೆ ಶಾಂತಿ ಸಿಗಲಿ. ಅ

*ಬಾಲಕೃಷ್ಣ ನಾಯ್ಕ್ ಡಿ.*



# 60ನೇ ಕರ್ನಾಟಕ ರಾಜ್ಯೋತ್ಸವ ಉದ್ಘಾಟನಾ ಸಮಾರಂಭ

ನವೆಂಬರ್ ತಿಂಗಳಿನಾದ್ಯಂತ ನಡೆಯಲಿರುವ 60ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ 1ರಂದು ಬೆಳಿಗ್ಗೆ 9.30ಕ್ಕೆ ಸರಿಯಾಗಿ ಭುವನೇಶ್ವರಿಯ ಪೂಜೆ, ರಾಷ್ಟ್ರಧ್ವಜವನ್ನು ಹಾರಿಸಿ  ನಾಡಗೀತೆ ಹಾಗೂ ರಾಷ್ಟ್ರಗೀತೆಯನ್ನು ಹಾಡುವುದರೊಂದಿಗೆ ಭಕ್ತಿಪೂರ್ವಕವಾಗಿ ಆರಂಭಿಸಲಾಯಿತು.

ಕನ್ನಡದ ಹಿರಿಯ ರಾಷ್ಟ್ರ ಕಲಾವಿದರು, ದೆಹಲಿಯ ಸಮಾಜ ಸುಧಾರಕ ಪ್ರಗತಿ ಶೀಲ ಸಂಸ್ಥೆಯ ಸ್ಥಾಪಕ ಅಧ್ಯಕ್ಷರು ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಭೀಮರಾವ್ ಮುರಗೋಡ, ಹಿರಿಯ ಕನ್ನಡತಿ ಮತ್ತು ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಅಧ್ಯಕ್ಷೆ, ಕನ್ನಡ ಬಳಗ ರಾಜೇಂದ್ರ ನಗರದ ಕಾರ್ಯದರ್ಶಿಯಾದ ಶ್ರೀಮತಿ ರಾಧಾ ಕೌಜಲಗಿ ಅವರು ಜಂಟಿಯಾಗಿ ಜ್ಯೋತಿ ಬೆಳಗಿಸುವುದರ ಮೂಲಕ ವಿದ್ಯುಕ್ತವಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂಘದ ಅಧ್ಯಕ್ಷರು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಇನ್ನಿತರ ಪದಾಧಿಕಾರಿಗಳು ಮತ್ತು ಸದಸ್ಯರು ಮತ್ತು ದೆಹಲಿ ಮತ್ತು ಹೊರನಾಡ ಕನ್ನಡಿಗರು ಭಾಗವಹಿಸಿದ್ದರು. ನೆರೆದಿದ್ದ ಎಲ್ಲರಿಗೂ ಸಿಹಿ ಹಂಚಲಾಯಿತು.

ಸಂಜೆ 4.30ಗಂಟೆಗೆ ಕರ್ನಾಟಕ ಭವನ, ನವದೆಹಲಿಯವರು, ಕರ್ನಾಟಕ ಸರ್ಕಾರದ ವತಿಯಿಂದ ಆಚರಿಸಲ್ಪಟ್ಟ ರಾಜ್ಯೋತ್ಸವ ಕಾರ್ಯಕ್ರಮವು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ಕನ್ನಡಿಗರ ಜಯಘೋಷಗಳೊಂದಿಗೆ ಬಹಳ ಅದ್ದೂರಿಯಿಂದ ನಡೆಯಿತು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳಾದ ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ, ಕರ್ನಾಟಕದ ವಿಧಾನ ಸಭೆಯ ಮಾಜಿ ಸಭಾಪತಿಗಳು ಮತ್ತು ಹಾಲಿ ಸದಸ್ಯರೂ ಆಗಿರುವ ಶ್ರೀ ವೀರಣ್ಣ ಮತ್ತಿಕಟ್ಟೆ, ಕರ್ನಾಟಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ಆಯುಕರು ಮತ್ತು ಲೇಖಕರಾದ ಶ್ರೀ ಮನು ಬಳಿಗಾರ್, ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ವಂದನಾ ಗುರ್ನಾನಿ ಅವರು ಜಂಟಿಯಾಗಿ ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಅ

*ಅಭಿಮತ ವರದಿ*






# ಸರ್ವ ಸದಸ್ಯರ ವಾರ್ಷಿಕ ಸಭೆ

ದೆಹಲಿ ಕರ್ನಾಟಕ ಸಂಘದ 2014–15ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಅಕ್ಟೋಬರ್ 2ರಂದು ಸಂಘದ ಸಭಾಂಗಣದಲ್ಲಿ ಮತ್ತು ಸಂಘದ 2015–17ನೇ ಸಾಲಿನ ಹೊಸ ಕಾರ್ಯಕಾರಿ ಸಮಿತಿಗೆ ಚುನಾವಣೆಯು ಅಕ್ಟೋಬರ್ 4ರಂದು, ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆಯ ನಂತರ ಮೊದಲ ಬಾರಿಗೆ, ಸಂಘದ ಆವರಣದಲ್ಲಿ ಯಶಸ್ವಿಯಾಗಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಾರ್ಷಿಕ ವರದಿಯನ್ನು ಹಾಗೂ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ಅವರು ಪರಿಶೋಧಿತ ಲೆಕ್ಕಪತ್ರ ಮತ್ತು 2015–16ನೇ ಸಾಲಿನ ಬಜೆಟನ್ನು ಮಂಡಿಸಿದರು. ಉಪಾಧ್ಯಕ್ಷರುಗಳಾದ ಶ್ರೀ ಬಿ.ಕೆ. ಬಸವರಾಜು, ಶ್ರೀಮತಿ ಆಶಾಲತಾ ಎಂ ಹಾಗೂ ಜಂಟಿ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ. ಮೈಲಾರಪ್ಪ ಮತ್ತು ಶ್ರೀಮತಿ ಎಸ್.ಸಿ. ಹೇಮಲತ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಮಾಜಿ ಅಧ್ಯಕ್ಷರುಗಳಾದ ಶ್ರೀ ಐ. ರಾಮಮೋಹನ ರಾವ್, ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಸಿ.ವಿ.ಗೋಪಿನಾಥ್, ಮಾಜಿ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಮಾಜಿ ಕೋಶಾಧಿಕಾರಿಗಳಾದ ಶ್ರೀ ಈಶ್ವರ ಮಡಿವಾಳ್, ಶ್ರೀ ಕೆ.ಆರ್. ರಾಮಮೂರ್ತಿ, ಹಿರಿಯರಾದ ಶ್ರೀ ಎನ್.ಎ. ಮಾಧವ, ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಚೆನ್ನು ಎಸ್. ಮಠದ, ಶ್ರೀ ಕೆ.ಎಸ್.ಜಿ. ಶೆಟ್ಟಿ, ಸದಸ್ಯರುಗಳಾದ ಡಾ. ವಿ.ಆರ್. ಗುಡ್ಡೇಗೌಡ, ಶ್ರೀ ಅಶೋಕ್ ಕುಮಾರ್ ವಿ, ಡಾ. ಶಶಿಕುಮಾರ್, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ಆರ್.ಎಸ್. ಶ್ಯಾಮಸುಂದರ್, ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀ ಈಶ್ವರಲಿಂಗ್ ಅರೇರಾ, ಶ್ರೀ ಶ್ರೀಹರಿ, ಶ್ರೀ ಎ.ಟಿ. ಶ್ರೀನಿವಾಸ್, ಶ್ರೀ ಕಾಶೀನಾಥ್ ಬಿರಾದಾರ, ಶ್ರೀ ನರಸಿಂಹ ಮೂರ್ತಿ, ಶ್ರೀ ಸಖಾರಾಮ ಉಪ್ಪೂರು, ಶ್ರೀ ಸಾಬುದರ್ಗಾ ಮೊದಲಾದವರು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಿದರು.

ಚರ್ಚೆಯ ಬಳಿಕ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಅನುಮೋದಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಸರ್ವ ಸದಸ್ಯರ ವಾರ್ಷಿಕ ಸಭೆಯು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಡೆಯಿತು.

ಇದೇ ಸಂದರ್ಭದಲ್ಲಿ ಚುನಾವಣಾಧಿಕಾರಿಯಾದ ಶ್ರೀ ಪಿ.ಎಸ್. ಶೆಟ್ಟಿ ಮತ್ತು ಜಂಟಿ ಚುನಾವಣಾ ಅಧಿಕಾರಿಗಳಾದ ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ಹರಿಪ್ರಿಯ ಎಸ್., ಮತ್ತು ಶ್ರೀ ಸುಧೀರ್ ವಿ. ಫಡ್ನೀಸ್ ಅವರುಗಳನ್ನು ಮತ್ತು ಚುನಾವಣಾ ಅಭ್ಯರ್ಥಿಗಳನ್ನು ಮಹಾಸಭೆಗೆ ಪರಿಚಯಿಸಲಾಯಿತು.

ಈ ವರ್ಷ ನಮ್ಮನ್ನು ಅಗಲಿದ ಸಂಘದ ಆಜೀವ ಸದಸ್ಯರುಗಳಾದ ಶ್ರೀ ಗುರುದತ್ ಬಿ.ಸಿ., ಶ್ರೀ ಅರವಿಂದ ಕೌಜಲಗಿ, ಡಾ. ಸರೋಜಿನಿ ಮಹಿಷಿ, ಶ್ರೀ ಸೀತಾರಾಮ್ ಶಾಸ್ತ್ರಿ, ಶ್ರೀಮತಿ ಶಶಿಕಲಾ ಶರ್ಮಾ ಮತ್ತು ಶ್ರೀ ರಾಮಚಂದ್ರ ಕಲ್ಲಪ್ಪ ಪೂಜಾರ್ ಅವರನ್ನು ನೆನೆದು ಎರಡು ನಿಮಿಷಗಳ ಮೌನ ಪ್ರಾರ್ಥನೆ ನಡೆಸಲಾಯಿತು. ಅ

***ಅಭಿಮತ ವರದಿ***








# ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ವಸಂತ ಶೆಟ್ಟಿ ಬೆಳ್ಳಾರೆ ಮರು ಆಯ್ಕೆ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ 2015–17ನೇ ಸಾಲಿಗೆ ಅಕ್ಟೋಬರ್ 4ರಂದು ನಡೆದ ಚುನಾವಣೆಯಲ್ಲಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅಧ್ಯಕ್ಷರಾಗಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಸಿ.ಎಂ. ನಾಗರಾಜ ಅವರು ಮರು ಆಯ್ಕೆಗೊಂಡಿದ್ದಾರೆ.

ಕಾರ್ಯಕಾರಿ ಸಮಿತಿಗೆ ಆಯ್ಕೆಗೊಂಡ ಪದಾಧಿಕಾರಿಗಳು ಮತ್ತು ಸದಸ್ಯರುಗಳು

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ–ಅಧ್ಯಕ್ಷರು, ಶ್ರೀಮತಿ ಆಶಾಲತಾ ಎಂ.–ಉಪಾಧ್ಯಕ್ಷರು, ಶ್ರೀಮತಿ ಎಸ್.ಸಿ. ಹೇಮಲತ–ಉಪಾಧ್ಯಕ್ಷರು (ಮಹಿಳೆಯರಿಗೆ ಮೀಸಲು), ಶ್ರೀ ಸಿ.ಎಂ. ನಾಗರಾಜ–ಪ್ರಧಾನ ಕಾರ್ಯದರ್ಶಿ, ಶ್ರೀ ಟಿ.ಪಿ. ಬೆಳ್ಳಿಯಪ್ಪ–ಜಂಟಿ ಕಾರ್ಯದರ್ಶಿ, ಶ್ರೀಮತಿ ಜಮುನಾ ಸಿ. ಮಠದ–ಜಂಟಿ ಕಾರ್ಯದರ್ಶಿ (ಮಹಿಳೆಯರಿಗೆ ಮೀಸಲು), ಶ್ರೀ ಕೆ.ಎಸ್.ಜಿ. ಶೆಟ್ಟಿ–ಕೋಶಾಧಿಕಾರಿಗಳು.

ಸದಸ್ಯರು : ಡಾ. ಎಂ.ಎಸ್. ಶಶಿಕುಮಾರ್, ಶ್ರೀ ರಾಧಾಕೃಷ್ಣ, ಶ್ರೀ ವಿ.ವಿ. ಬಿರಾದಾರ, ಶ್ರೀ ಸಖಾರಾಮ ಉಪ್ಪೂರು, ಶ್ರೀ ಶಶಿಕಾಂತ್ ಪಾಟೀಲ್, ಶ್ರೀ ಬಾಬುರಾಜ್ ಪೂಜಾರಿ, ಶ್ರೀಮತಿ ಪೂಜಾ ಪಿ. ರಾವ್ ಮತ್ತು ಶ್ರೀಮತಿ ಸುಮಿತಾ ಮುರಗೋಡ್ (ಮಹಿಳೆಯರಿಗೆ ಮೀಸಲು)

ಚುನಾವಣೆಯಲ್ಲಿ ಸ್ಪರ್ಧಿಸಿದ ಇತರ ಅಭ್ಯರ್ಥಿಗಳು: ಶ್ರೀ ಆರ್. ರೇಣುಕುಮಾರ್ (ಅಧ್ಯಕ್ಷ ಸ್ಥಾನಕ್ಕೆ), ಶ್ರೀ ಟಿ.ಪಿ. ಮೈಲಾರಪ್ಪ (ಉಪಾಧ್ಯಕ್ಷ ಸ್ಥಾನಕ್ಕೆ), ಶ್ರೀಮತಿ ಎನ್.ಎಂ. ಸರೋಜ (ಉಪಾಧ್ಯಕ್ಷ ಸ್ಥಾನಕ್ಕೆ–ಮಹಿಳಾ ಮೀಸಲು), ಶ್ರೀ ಕೆ.ಆರ್. ರಾಮಮೂರ್ತಿ, ಶ್ರೀ ಎ.ಟಿ. ಶ್ರೀನಿವಾಸ (ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ), ಶ್ರೀ ಎನ್.ಆರ್. ಶ್ರೀನಾಥ್ (ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ) ಶ್ರೀಮತಿ ಗಿರಿಜಾ ಜಿ.ಕೆ. (ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ–ಮಹಿಳಾ ಮೀಸಲು), ಶ್ರೀ ಬಿ.ಕೆ. ಬಸವರಾಜು (ಖಜಾಂಚಿ ಸ್ಥಾನಕ್ಕೆ), ಸದಸ್ಯ ಸ್ಥಾನಕ್ಕೆ– ಶ್ರೀ ಅಶೋಕ್ ಕುಮಾರ್, ಶ್ರೀ ಎಚ್. ಚಂದ್ರಶೇಖರ, ಶ್ರೀ ಈಶ್ವರಲಿಂಗ ಅರೇರಾ, ಶ್ರೀ ನಾರಾಯಣ ಬಿ., ಶ್ರೀ ಎಸ್. ಪರಮೇಶ್ ಹಾಗೂ ಶ್ರೀಮತಿ ಲತಾ ಇಡ್ಯಾ ಮತ್ತು ಶ್ರೀಮತಿ ತಾರಾ ರಮೇಶ್ (ಮಹಿಳಾ ಮೀಸಲು)

ಬೆಳಿಗ್ಗೆ 8ರಿಂದ ಪ್ರಾರಂಭಗೊಂಡ ಚುನಾವಣಾ ಪ್ರಕ್ರಿಯೆಯಲ್ಲಿ ಒಟ್ಟು 737 ಸದಸ್ಯರು ಮತ ಚಲಾಯಿಸಿದ್ದರು. ಈ ಚುನಾವಣೆಯನ್ನು ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಉಪಮಹಾ ಪ್ರಬಂಧಕ, ಸಂಘದ ಸಕ್ರಿಯ ಸದಸ್ಯ, ವೃತ್ತಿಯಲ್ಲಿ ವಕೀಲರಾದ ಶ್ರೀ ಪಿ.ಎಸ್. ಶೆಟ್ಟಿ ಅವರು ಚುನಾವಣಾ ಅಧಿಕಾರಿಯಾಗಿ, ಶ್ರೀ ಶಿವಾನಂದ ಇಂಗಳೇಶ್ವರ, ಶ್ರೀ ಹರಿಪ್ರಿಯ ಎಸ್., ಮತ್ತು ಶ್ರೀ ಸುಧೀರ್ ವಿ. ಫಡ್ನೀಸ್ ಅವರು ಜಂಟಿ ಚುನಾವಣಾ ಅಧಿಕಾರಿಗಳಾಗಿ ಮತ್ತು ತಂಡ ಕಾರ್ಯ ನಿರ್ವಹಿಸಿ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಅ

*ಅಭಿಮತ ವರದಿ*









# ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ

ಅಧ್ಯಕ್ಷ

**ಶ್ರೀ ವಸಂತ ಶೆಟ್ಟಿ ಬೆಳ್ಳಾರೆ**



ಸುಮಾರು ಮೂರು ದಶಕಗಳಿಂದ ದೆಹಲಿಯಲ್ಲಿರುವ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಳೆದ ಅವಧಿಯಲ್ಲಿ ಪ್ರಥಮ ಬಾರಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದರು. ಸಂಘದ ಜಂಟಿ ಕಾರ್ಯದರ್ಶಿ ಮತ್ತು ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಅವರು ದೆಹಲಿಯಲ್ಲಿ ಓರ್ವ ಉತ್ತಮ ಸಂಘಟಕರಾಗಿ, ಕಲೆ ಮತ್ತು ಸಂಸ್ಕೃತಿಯ ಪೋಷಕರಾಗಿ ಮತ್ತು ನಿಷ್ಠ ಆಡಳಿತಗಾರರಾಗಿ ಹೆಸರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಡಳಿತ ವ್ಯವಹಾರವನ್ನು ಸದಾ ಎಚ್ಚರಿಕೆಯ ದೃಷ್ಟಿಯಿಂದ ಗಮನಿಸುವ ಅವರು ಸಂಘದ ಬೆಳವಣಿಗೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಿತಿಯಲ್ಲಿ, ಅಭಿಮತದ ಸಂಪಾದಕ ಮಂಡಳಿಯಲ್ಲಿ ಮತ್ತು ಆಡಳಿತ ಸಮಿತಿಯಲ್ಲಿ ತಮ್ಮ ಜವಾಬ್ದಾರಿಗಳನ್ನು ಬಹಳ ಮುತುವರ್ಜಿಯಿಂದ ಅವರು ನಿರ್ವಹಿಸಿದ್ದಾರೆ. ದೆಹಲಿಯಲ್ಲಿದ್ದು ಕರ್ನಾಟಕದ ಎಲ್ಲಾ ಭಾಗಗಳ ಜನರ ಆಶೋತ್ತರಗಳಿಗೆ ಧ್ವನಿಯಾಗಿದ್ದಾರೆ. ಅವರು ಸಂಘದ ಆಡಳಿತದಲ್ಲಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೊಸ ಮುಖಗಳನ್ನು ಪರಿಚಯಿಸುತ್ತಾ ದೆಹಲಿಯಲ್ಲಿ ಅನೇಕ ವ್ಯಕ್ತಿಗಳ ಪ್ರತಿಭೆಗಳು ಅರಳುವಂತೆ ಪ್ರೋತ್ಸಾಹಿಸಿದ್ದಾರೆ. ಸಾಹಿತ್ಯಾಸಕ್ತರಾಗಿರುವ ಅವರ ಒಂದೊಂದು ಕಾದಂಬರಿ, ಕಥಾ ಸಂಕಲನ ಮತ್ತು ಕವನ ಸಂಕಲನವು ಪ್ರಕಟವಾಗಿದೆ. ಜತೆಗೆ ಅವರು ದೆಹಲಿಯ ಅನೇಕ ಬರಹಗಾರರ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಸರಕಾರವು ಅವರನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರನ್ನಾಗಿಯೂ ನೇಮಿಸಿದೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿಯಲ್ಲಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ



ಉಪಾಧ್ಯಕ್ಷೆ

**ಶ್ರೀಮತಿ ಆಶಾಲತಾ ಎಂ.**

ಕಳೆದ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ ಆಶಾಲತಾ ಎಂ. ಅವರು ಸದಾ ಚುರುಕಾಗಿದ್ದು ಬಹುಮುಖ ಪ್ರತಿಭೆಯವರಾಗಿದ್ದಾರೆ. ದೆಹಲಿಯಲ್ಲಿ ಓರ್ವ ಉತ್ತಮ ರಂಗ ಕಲಾವಿದೆಯಾಗಿ ರೂಪುಗೊಳ್ಳುತ್ತಿರುವ ಅವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿ ನಡೆಸಿಕೊಡುವುದರಲ್ಲೂ ನಿಸ್ಸೀಮರಾಗಿದ್ದಾರೆ. ಸಾಹಿತ್ಯದಲ್ಲಿ ಪದವಿ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮ ಪಡೆದಿರುವ ಅವರು ದೆಹಲಿ ಮೆಟ್ರೋ ರೈಲು ಕಾರ್ಪೋರೇಶನ್‌ನಲ್ಲಿ ಉದ್ಯೋಗದಲ್ಲಿದ್ದಾರೆ. ಎಳವೆಯಿಂದಲೇ ಬೆಂಗಳೂರಿನಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮ ಪ್ರತಿಭಾ ಪ್ರದರ್ಶನ ಮಾಡಿರುವ ಅವರು ಹಲವಾರು ಪುರಸ್ಕಾರಗಳನ್ನು ಪಡೆದಿದ್ದಾರೆ. ದೆಹಲಿ ಕರ್ನಾಟಕ ಸಂಘವಲ್ಲದೇ ಇತರ ಸಂಘ ಸಂಸ್ಥೆಗಳಲ್ಲಿಯೂ ಕ್ರಿಯಾಶೀಲರಾಗಿರುವ ಅವರ ನಾಯಕತ್ವ ಗುಣಗಳು ಪ್ರಶಂಸನೀಯವಾಗಿದೆ. ಸಂಘದ ಪತ್ರಿಕೆ ಅಭಿಮತದ ಸಂಪಾದಕ ಮಂಡಳಿಯಲ್ಲಿ ಮತ್ತು ಸಂಘದ ನೂತನ ಗ್ರಂಥಾಲಯವನ್ನು ಸುಸಜ್ಜಿತಗೊಳಿಸುವಲ್ಲಿ ಅವರು ಹಗಲಿರುಳೆನ್ನದೇ ದುಡಿದಿದ್ದಾರೆ.

ಉಪಾಧ್ಯಕ್ಷೆ

**ಶ್ರೀಮತಿ ಎಸ್.ಸಿ. ಹೇಮಲತಾ**



ಶ್ರೀಮತಿ ಹೇಮಲತಾ ಗುಡ್ಡೇಗೌಡ ಇವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಈ ಹಿಂದಿನ ಅವಧಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ (ಹಣಕಾಸು) ಸೇವೆ ಸಲ್ಲಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. ದೆಹಲಿಯ 'ದೆಹಲಿ ಒಕ್ಕಲಿಗ ಗೌಡ ಸಮಾಜ'ದ ಉಪಾಧ್ಯಕ್ಷರು. ನಾಟಕ ಮತ್ತು ಸಂಗೀತ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉತ್ತಮ ಸಂಘಟಕಿ.

ಪ್ರಧಾನ ಕಾರ್ಯದರ್ಶಿ

**ಶ್ರೀ ಸಿ.ಎಂ. ನಾಗರಾಜ**



ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಸಿ.ಎಂ. ನಾಗರಾಜ ಅವರು ಕರ್ನಾಟಕ ಸರಕಾರವು ತನ್ನ ಬಜೆಟ್‌ನಲ್ಲಿ ಒಂದು ಕೋಟಿ ರೂಪಾಯಿ ಹಣವನ್ನು ಸಂಘಕ್ಕೆ ಅನುದಾನವಾಗಿ ಘೋಷಿಸಿದಾಗ, ಅದನ್ನು ತ್ವರಿತಗತಿಯಲ್ಲಿ ಬಿಡುಗಡೆಯಾಗುವಂತೆ ಮಾಡಿದ್ದಾರೆ. ಸಂಘಕ್ಕೆ ಸರಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಕಳೆದ ಎರಡು ವರ್ಷಗಳಿಂದ ಪ್ರತಿ ವರ್ಷ ರೂ.20 ಲಕ್ಷ ಅನುದಾನ ಬರುವಂತೆ ಮಾಡಿದ್ದಾರೆ. ಮಾತ್ರವಲ್ಲ ಸ್ಥಳೀಯ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನಿಂದ ಕರ್ನಾಟಕದ ನುರಿತ ಕಲಾವಿದರಿಂದ ತರಬೇತಿ ಕೊಡಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆಯಲ್ಲಿರುವ ಇವರು ಪ್ರಸ್ತುತ ಪ್ರಧಾನ ಮಂತ್ರಿಗಳ ಆಪ್ತ ಸಿಬ್ಬಂದಿ ವರ್ಗದಲ್ಲಿ ಇದ್ದಾರೆ. ಎಂ.ಎ ಪದವೀಧರರಾಗಿರುವ ಅವರು ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೋಮವನ್ನೂ ಹೊಂದಿದ್ದಾರೆ. ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯ ಕಾರ್ಯದರ್ಶಿಯಾಗಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಮಾಜದ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಕೆಲಸ ಕಾರ್ಯಗಳನ್ನು ಗುರುತಿಸಿ 2011ರಲ್ಲಿ ಗಂಗಾವತಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ವತಿಯಿಂದ ರಾಜ್ಯದ ಮುಖ್ಯಮಂತ್ರಿಯವರು ಅವರನ್ನು ಗೌರವಿಸಿ ಸನ್ಮಾನಿಸಿದ್ದಾರೆ. ದೆಹಲಿಯಲ್ಲಿ ನಡೆದ ನಾಡ ಪ್ರಭು ಕೆಂಪೇಗೌಡ ರಾಷ್ಟ್ರೀಯ ಉತ್ಸವದ ಸಂಚಾಲಕರಾಗಿ ಐತಿಹಾಸಿಕ ಕಾರ್ಯಕ್ರಮವನ್ನು ಸಂಘಟಿಸಿದ್ದಾರೆ. ಅದಲ್ಲದೆ ಅವರ ಸಂಚಾಲಕತ್ವದಲ್ಲಿ ಜರಗಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರಾಷ್ಟ್ರೀಯ ಉತ್ಸವ ಯಶಸ್ವಿಯಾಗಿ ಜರಗಿದೆ.



ಖಜಾಂಚಿ

**ಶ್ರೀ ಕೆ.ಎಸ್.ಜಿ. ಶೆಟ್ಟಿ**

ಎಳವೆಯಲ್ಲಿಯೇ ಶ್ರೀ ಕೆ.ಎಸ್.ಜಿ. ಶೆಟ್ಟಿ ಅವರು ಮುಂಬಯಿಯಲ್ಲಿ ಮತ್ತು ದೆಹಲಿಯಲ್ಲಿ ಕನ್ನಡಿಗರನ್ನು ಸಂಘಟಿಸುವಲ್ಲಿ ಅಪಾರವಾದ ಕೆಲಸಗಳನ್ನು ಮಾಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯಿರಬೇಕೆಂದು ಅವರು ಸದಾ ಹೋರಾಟ ಮಾಡಿದ್ದಾರೆ. 2008–10ರಲ್ಲಿ ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯ ಖಜಾಂಚಿಯಾಗಿ ಅವರು ಮಾಡಿದ ಉತ್ತಮ ಸೇವೆಯು ಎಲ್ಲರಿಂದಲೂ ಪ್ರಶಂಸೆಗೆ ಪಾತ್ರವಾಗಿದೆ. ದೆಹಲಿ ಕರ್ನಾಟಕ ಸಂಘ, ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಮತ್ತು ಕನ್ನಡ ಬಳಗ ರಾಜೇಂದ್ರನಗರದ ಜಂಟಿ ಕಾರ್ಯದರ್ಶಿ, ಕನ್ನಡ ಫಿಲ್ಮ್ ಸೊಸೈಟಿಯ ಕಾರ್ಯದರ್ಶಿಯಾಗಿ, ಜನಕಪುರಿ ಕನ್ನಡಕೂಟದ ಉಪಾಧ್ಯಕ್ಷರಾಗಿ, ತುಳುನಾಡು ಅಭಿವೃದ್ಧಿ ವೇದಿಕೆ ಮೊದಲಾದ ಸಂಘ ಸಂಸ್ಥೆಗಳಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವರು. ಸೌತ್ ಕೆನರಾ ಕ್ಲಬ್ ಮತ್ತು ದೆಹಲಿ ತುಳುಸಿರಿಯ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಮಾಜಿಕ ಸಮನ್ವಯ ಸಂಘಟನೆಯ (ಎನ್.ಜಿ.ಓ) ವಕ್ತಾರರಾಗಿದ್ದಾರೆ.

ಜಂಟಿ ಕಾರ್ಯದರ್ಶಿ

**ಶ್ರೀ ಟಿ.ಪಿ. ಬೆಳ್ಳಿಯಪ್ಪ**



ದೆಹಲಿಯ ಕನ್ನಡಿಗರ ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ಟಿ.ಪಿ. ಬೆಳ್ಳಿಯಪ್ಪನವರು ಕಳೆದ 30 ವರ್ಷಗಳಿಂದ ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆಯಲ್ಲಿದ್ದಾರೆ.

ಐದು ಬಾರಿ ಅಖಿಲ ಭಾರತ ಪೋಲೀಸ್ ಕ್ರೀಡಾ ಕೂಟ ಹಾಗೂ 16 ಬಾರಿ ಅಂತರ್ ರಾಜ್ಯ ಪೋಲೀಸ್ ಕ್ರೀಡಾ ಕೂಟಗಳಲ್ಲಿ ಹಾಕಿ ಕ್ರೀಡೆಯನ್ನು ಪ್ರತಿನಿಧಿಸಿದ್ದಾರೆ. ದೆಹಲಿ ಒಕ್ಕಲಿಗ ಗೌಡ ಸಂಘದ ಜಂಟಿ ಕಾರ್ಯದರ್ಶಿಯಾಗಿ, ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯ ಖಜಾಂಚಿಯಾಗಿ ಹಾಗೂ ಉಪಾಧ್ಯಕ್ಷರಾಗಿ ದುಡಿದಿದ್ದಾರೆ. ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರೀಡಾ ಕೂಟದಲ್ಲಿ ಯುವಕರನ್ನು ತೊಡಗಿಸಿ ಬೆಳ್ಳಿಯಪ್ಪ ತಂಡದ ಮೂಲಕ ಎರಡು ಬಾರಿ ದೆಹಲಿ ಕರ್ನಾಟಕ ಸಂಘದ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಟ್ರೋಫಿಯನ್ನು ಗೆದ್ದಿದ್ದಾರೆ.



**ಜಂಟಿ ಕಾರ್ಯದರ್ಶಿ**

**ಶ್ರೀಮತಿ ಜಮುನಾ ಸಿ. ಮಠದ**

ಎರಡು ದಶಕಗಳಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆಯಾಗಿ ಕ್ರಿಯಾಶೀಲರಾಗಿ ದುಡಿಯುತ್ತಿರುವ ಶ್ರೀಮತಿ ಜಮುನಾ ಸಿ. ಮಠದ ಅವರು ದೆಹಲಿಯಲ್ಲಿ ಕನ್ನಡ ತಿಳಿಯದವರಿಗೆ ಕನ್ನಡ ತರಗತಿಗಳನ್ನು ನಡೆಸಿದ್ದಾರೆ. ಜತೆಗೆ ಸಂಗೀತ ಶಿಕ್ಷಣವನ್ನು ದಶಕಗಳಿಂದ ನಿರಂತರವಾಗಿ ನೀಡುತ್ತಿದ್ದಾರೆ. ವೃತ್ತಿಯಲ್ಲಿ ಶಿಕ್ಷಕಿಯಾಗಿರುವ ಅವರು ಸಾಹಿತ್ಯ, ಸಂಗೀತ, ನಾಟಕ ಮತ್ತು ಲಲಿತ ಕಲೆಗಳಲ್ಲಿ ಅನನ್ಯ ಸಾಧನೆ ಮಾಡಿದ್ದಾರೆ. ಹಲವಾರು ನಾಟಕಗಳಲ್ಲಿ ಅಭಿನಯಿಸಿದಲ್ಲದೇ ರಂಗದ ಹಿಂದೆಯೂ ಅಪಾರ ಕೆಲಸ ಮಾಡಿದ್ದಾರೆ. ಅಭಿಮತದಲ್ಲಿ ನಿರಂತರ ಬರೆಯುತ್ತಿರುವ ಇವರ ಕತೆ ಮತ್ತು ಕವನಗಳು ಕನ್ನಡದ ವಾರಪತ್ರಿಕೆ ಸುಧಾ ಸೇರಿದಂತೆ ಹಲವಾರು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅವರು ಈಗಾಗಲೇ ಐದು ನಾಟಕಗಳನ್ನು ರಚಿಸಿದ್ದಾರೆ. ಅತ್ಯುತ್ತಮ ಸಂಘಟಕಿಯಾಗಿರು ಇವರು ದೆಹಲಿ ಜೋಳದ ಬಳಗದ ಸಂಚಾಲಕಿಯಾಗಿ ಕೆಲಸ ಮಾಡಿದ್ದಾರೆ. ಬಸವ ಇಂಟರ್ ನ್ಯಾಷನಲ್‌ನ ಸ್ಥಾಪಕ ಸದಸ್ಯೆಯಾಗಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿಯಿಂದ ಬಹುಮಾನವೂ ದೊರೆತಿದೆ.

## ಸದಸ್ಯರು

**ಡಾ. ಎಂ.ಎಸ್. ಶಶಿಕುಮಾರ್**



ಭಾರತ ಸರ್ಕಾರದ ವಿಜ್ಞಾನ ಮತ್ತು ಔದ್ಯಮಿಕ ಸಂಶೋಧನಾ ವಿಭಾಗದಲ್ಲಿ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಂ.ಎಸ್. ಶಶಿಕುಮಾರ್ ಅವರು ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ 2008–10ರಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ, ಪಿ.ಎಚ್.ಡಿ. ಪದವೀಧರರು. ಸಾಮಾಜಿಕ ಸಂಘಟನೆಗಳಲ್ಲಿ ಅವರಿಗೆ ಆಸಕ್ತಿಯಿದೆ.



**ಶ್ರೀ ರಾಧಾಕೃಷ್ಣ**

ಸುಮಾರು 25 ವರ್ಷಗಳಿಂದ ದೆಹಲಿಯ ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ರಾಧಾಕೃಷ್ಣ ಅವರು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳ ಕಾರ್ಯಕಾರಿ ಸಮಿತಿಗಳಲ್ಲಿಯೂ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಎಲ್ಲರಿಗೂ ಸಹಾಯ ಮಾಡುವ ಇವರು ಕರ್ನಾಟಕ ಕರಾವಳಿ ಮಿತ್ರ ಮಂಡಳಿಯ ಗೌರವ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಶ್ರೀಮತಿ ಪೂಜಾ ಪಿ. ರಾವ್**



ಅತ್ಯುತ್ತಮ ಗಾಯಕಿಯಾಗಿರುವ ಶ್ರೀಮತಿ ಪೂಜಾ ರಾವ್ ಅವರು ಕರ್ನಾಟಕ ಶಾಸ್ತ್ರೀಯ ಹಾಗೂ ಹಿಂದೂಸ್ತಾನಿ ಸಂಗೀತದಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ದೆಹಲಿ ಕರ್ನಾಟಕ ಸಂಘ, ಗೌಡ ಸಾರಸ್ವತ ಸಮಾಜ, ದೆಹಲಿ ತುಳು ಸಿರಿ ಮೊದಲಾದ ಸಂಘ ಸಂಸ್ಥೆಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿರುವ ಇವರು ಉತ್ತಮ ಕಾರ್ಯಕ್ರಮ ನಿರ್ವಾಹಕಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಳೆದ ಅವಧಿಯಲ್ಲಿ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿ ಅನೇಕ ಹಿರಿಯ ಗಾಯಕರ ಕಾಯಕ್ರಮಗಳನ್ನು ಸಂಘದಲ್ಲಿ ನಡೆಸಲು ಬಹಳಷ್ಟು ಕೊಡುಗೆ ನೀಡಿದ್ದಾರೆ.



**ಶ್ರೀ ವಿ.ವಿ.ಬಿರಾದಾರ**

ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳಲ್ಲದೇ ದೆಹಲಿ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ಬಸವ ಇಂಟರ್‌ನ್ಯಾಷನಲ್ ಸೆಂಟರ್ ಮೊದಲಾದೆಡೆ ವಿವಿಧ ಹುದ್ದೆಗಳನ್ನಲಂಕರಿಸಿರುವ ಶ್ರೀ ವಿ.ವಿ. ಬಿರಾದಾರ್ ಅವರು ಭಾರತದ ರಾಷ್ಟ್ರಪತಿಯವರ ಆಪ್ತ ಕಾರ್ಯದರ್ಶಿಯಾಗಿ ಹಾಗೂ ಕೇಂದ್ರ ಸರಕಾರದ ವಿವಿಧ ಮಂತ್ರಿಗಳ ಜತೆ ಕೆಲಸ ಮಾಡಿದ ಅಪಾರ ಅನುಭವವನ್ನು ಹೊಂದಿದ್ದಾರೆ. ಅವರೀಗ ಕೇಂದ್ರ ಸಚಿವ ಶ್ರೀ ಜಿ.ಎಂ. ಸಿದ್ಧೇಶ್ವರ ಅವರ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಭಾಲ್ಕಿ ಶ್ರೀ ಚೆನ್ನಬಸವ ಪಟ್ಟದೇವರ ಅವರ 'ಕಾಯಕ' ಪ್ರಶಸ್ತಿ ದೊರೆತಿದೆ.

**ಶ್ರೀ ಸಖಾರಾಮ ಉಪ್ಪೂರು**



ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದಿರುವ ಶ್ರೀ ಸಖಾರಾಮ ಉಪ್ಪೂರು ಅವರ ಆಸಕ್ತಿ ರಂಗಭೂಮಿ, ಸಾಹಿತ್ಯ, ಸಮಾಜ ಸೇವೆ. ಅವರು ಕನ್ನಡ ನಾಡು–ನುಡಿ ಸಂಸ್ಕೃತಿ ಬಗ್ಗೆಯೂ ಅತೀವ ಕಾಳಜಿ ಹೊಂದಿರುತ್ತಾರೆ. ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಕೂಡಾ ಕಾರ್ಯ ನಿರ್ವಹಿಸಿದ್ದರು, 1985ರಿಂದ ದೆಹಲಿ ಕರ್ನಾಟಕ ಸಂಘ ಹಾಗೂ ಇತರ ಕನ್ನಡ ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ವಿವಿಧ ಪ್ರತಿಷ್ಠಿತ ಸಂಸ್ಥೆಗಳಲ್ಲಿ ದುಡಿದಿರುವ ಇವರು ಈಗ ಎನ್‌ಟಿಪಿಸಿ ಸ್ಕೂಲ್ ಆಫ್ ಬಿಸಿನೆಸ್‌ನಲ್ಲಿ ಪ್ರೊಫೆಸರ್ ಆಗಿದ್ದಾರೆ. ಸಮಾಜಶಾಸ್ತ್ರದ ಕುರಿತಾದ ಐದು ಪುಸ್ತಕಗಳನ್ನು ಅವರು ಸಂಪಾದಿಸಿದ್ದಾರೆ.



**ಶ್ರೀಮತಿ ಸುಮಿತಾ ಮುರಗೋಡ**

ಸಂಗೀತ, ನಾಟಕ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೊಂದಿರುವ ಶ್ರೀಮತಿ ಸುಮಿತಾ ಮುರಗೋಡ ಅವರು ದೆಹಲಿಯ ಗಂಧರ್ವ ಮಹಾವಿದ್ಯಾಲಯದಲ್ಲಿ ವಯಲಿನ್ ಸಂಗೀತ ತರಬೇತಿ ಪಡೆಯುತ್ತಿದ್ದಾರೆ. ದೆಹಲಿಯ ಸಮಾಜ ಸುಧಾರಕ ಪ್ರಗತಿ ಶೀಲ ಸಂಸ್ಥೆ ಹಾಗೂ ಇನ್ನೂ ಹಲವಾರು ಸಮಾಜ ಸೇವಾ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಮಾಜ ಶಾಸ್ತ್ರದಲ್ಲಿ ಎಂ.ಎ. ಪದವೀಧರೆಯಾಗಿರುವ ಈಕೆ 15 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ.

**ಶ್ರೀ ಶಶಿಕಾಂತ ಪಾಟೀಲ್**



ಸಂಸತ್ ಭವನದಲ್ಲಿ ಉದ್ಯೋಗದಲ್ಲಿರುವ ಶಶಿಕಾಂತ ಪಾಟೀಲ್, ದೆಹಲಿಯ ಗಣೇಶ ಮಿತ್ರಮಂಡಳಿಯ ಕಾರ್ಯದರ್ಶಿಯಾಗಿ ಬಹಳಷ್ಟು ದುಡಿದ ಅನುಭವ ಹೊಂದಿರುವರು. ತುಂಬಾ ಮಿತಭಾಷಿಯಾಗಿರುವ ಶಶಿಕಾಂತ್ ದೆಹಲಿ ಕರ್ನಾಟಕ ಸಂಘದಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದ್ದ ಇವರು ಈ ಮೊದಲೂ ಸಹ ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಹುಮ್ಮಸ್ಸಿನಿಂದ ದುಡಿದಿದ್ದಾರೆ.




**ಶ್ರೀ ಬಾಬುರಾಜ್ ಪೂಜಾರಿ**

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಎರಡು ಅವಧಿಯಲ್ಲಿ ಸೇವೆ ಸಲ್ಲಿಸಿರುವ ಶ್ರೀ ಬಾಬುರಾಜ್ ಪೂಜಾರಿ ಅವರು ದೆಹಲಿಯಲ್ಲಿ ಐಟಿ ಕ್ಷೇತ್ರದಲ್ಲಿ ಬಿಸಿನೆಸ್ ಮಾಡುವುದರ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ದೆಹಲಿ ಬಿಲ್ಲವರ ಸಂಘ, ದೆಹಲಿ ತುಳುಸಿರಿ ಮೊದಲಾದ ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿರುವ ಇವರು ಯಾವುದೇ ಕೆಲಸವನ್ನು ಅತ್ಯಂತ ನಿಪುಣತೆಯಿಂದ ನಡೆಸುವುದರಲ್ಲಿ ಪರಿಣಿತರಾದವರು.

# ಕಾರ್ಯಕಾರಿ ಸಮಿತಿ ವಿಶೇಷ ಆಹ್ವಾನಿತರು

ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಹಿರಿಯ ಕನ್ನಡಿಗರಾದ ಶ್ರೀ ಐ. ರಾಮಮೋಹನ ರಾವ್, ಶ್ರೀ ಶರತ್ ಎಸ್. ಜವಳಿ, ಡಾ. ಪುರುಷೋತ್ತಮ ಬಿಳಿಮಲೆ, ಶ್ರೀಮತಿ ಎನ್.ಎಂ. ಸರೋಜ, ಶ್ರೀಮತಿ ರಾಧಾ ಕೌಜಲಗಿ, ಶ್ರೀ ಎಂ. ಶಿವರಾಮ್ ರೈ ಮತ್ತು ಶ್ರೀ ಪಿ. ರಾಜಣ್ಣ ಅವರುಗಳನ್ನು ವಿಶೇಷ ಆಹ್ವಾನಿತರಗಳನ್ನಾಗಿ ನೇಮಸಿಕೊಳ್ಳಲಾಗಿದೆ.



**ಶ್ರೀ ಐ. ರಾಮಮೋಹನ ರಾವ್**
ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಶ್ರೀ ಐ. ರಾಮಮೋಹನ ರಾವ್ ಅವರು ಭಾರತ ಸರ್ಕಾರದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಇದೀಗ ಎ.ಎನ್.ಐ. ಸುದ್ದಿ ಸಂಸ್ಥೆಯಲ್ಲಿ ಸಂಪಾದಕರಾಗಿದ್ದಾರೆ. ಅವರು ನಾಲ್ವರು ಪ್ರಧಾನಮಂತ್ರಿಗಳಿಗೆ ವಾರ್ತಾ ಸಲಹೆಗಾರರೂ ಆಗಿದ್ದರು.

**ಶ್ರೀ ಶರತ್ ಎಸ್. ಜವಳಿ**



ಸುಪ್ರೀಂ ಕೋರ್ಟಿನ ಹಿರಿಯ ವಕೀಲರಾಗಿರುವ ಶ್ರೀ ಶರತ್ ಎಸ್. ಜವಳಿ ಅವರು ದೆಹಲಿಯ ಹಿರಿಯ ತಲೆಮಾರಿನ ಕನ್ನಡಿಗರಲ್ಲೊಬ್ಬರು. ಅಜ್ಮೇರ್‌ನಲ್ಲಿರುವ ಮಾಯೋ ಕಾಲೇಜಿನ ಆಡಳಿತ ಮಂಡಳಿ ಮತ್ತು ಇನ್ನಿತರ ಸಂಘ ಸಂಸ್ಥೆಗಳಲ್ಲಿ ಅವರು ಕ್ರಿಯಾಶೀಲರಾಗಿದ್ದಾರೆ.



**ಡಾ. ಪುರುಷೋತ್ತಮ ಬಿಳಿಮಲೆ**
ಖ್ಯಾತ ಜಾನಪದ ವಿದ್ವಾಂಸ, ಅಂಕಣಕಾರ ಹಾಗೂ ವಿಮರ್ಶಕ ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು. ಅಮೇರಿಕನ್ ಇನ್ಸಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಇದೀಗ ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿ ಸೇವೆ ನಿರ್ವಹಿಸುತ್ತಿದ್ದಾರೆ.

**ಶ್ರೀಮತಿ ಸರೋಜ ಮಾಧವ**



ದೆಹಲಿ ಕರ್ನಾಟಕ ಸಂಘದ ಬಹುತೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಕಲೆ ಮತ್ತು ಸಾಹಿತ್ಯಾಸಕ್ತೆಯಾಗಿರುವ ಶ್ರೀಮತಿ ಸರೋಜಾ ಮಾಧವ ಅವರು ದೆಹಲಿಯಲ್ಲಿ ಸುಮಾರು ಮೂರು ದಶಕಗಳಿಂದ ವಾಸಿಸುತ್ತಿದ್ದಾರೆ. ಅವರು ಸಂಘದ ಪತ್ರಿಕೆ ಅಭಿಮತದ ಮೂಲಕ ತಮ್ಮ ಕಾವ್ಯಾಸಕ್ತಿ ಮತ್ತು ಬರಹಗಳಲ್ಲಿರುವ ಆಸಕ್ತಿಯನ್ನು ಪ್ರಕಟ ಪಡಿಸಿದ್ದಾರೆ. ಉತ್ತಮ ಸಂಘಟಕಿಯಾಗಿರುವ ಅವರು ದೆಹಲಿಯ ಸ್ನೇಹಾ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಕಾರ್ಯದರ್ಶಿಯಾಗಿ, ಸಂಘದ ಮಹಿಳಾ ಉಪಸಮಿತಿಯ ಅಧ್ಯಕ್ಷೆಯಾಗಿ, ದೆಹಲಿ ಒಕ್ಕಲಿಗ ಗೌಡ ಸಂಘದ ಉಪಾಧ್ಯಕ್ಷೆಯಾಗಿ ಸಾರ್ವಜನಿಕ ರಂಗದಲ್ಲಿ ಅಪಾರ ಪ್ರೀತ್ಯಾದರಗಳನ್ನು ಪಡೆದಿದ್ದಾರೆ. ನೃತ್ಯ, ಗಾಯನ ಮತ್ತು ರಂಗಭೂಮಿ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿರುವ ಅವರಿಗೆ ಒಕ್ಕಲಿಗ ಸಂಘ, ಬೆಂಗಳೂರು ತ್ಯಾಗಿ ಲಕ್ಷ್ಮೀದೇವಿ ಪ್ರಶಸ್ತಿ ನೀಡಿ ಗೌರವಿಸಿದೆ. ಸರಳವಾದ ಮತ್ತು ವಿನಯವಂತ ನಡತೆಯ ಅವರು ಎಂ.ಎ. ಪದವೀಧರೆಯಾಗಿದ್ದಾರೆ.



**ಶ್ರೀಮತಿ ರಾಧಾ ಕೌಜಲಗಿ**
ಹಿರಿಯ ಕನ್ನಡತಿ ಮತ್ತು ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಅಧ್ಯಕ್ಷೆ, ಕನ್ನಡ ಬಳಗ ರಾಜೇಂದ್ರ ನಗರದ ಕಾರ್ಯದರ್ಶಿಯಾದ ಶ್ರೀಮತಿ ರಾಧಾ ಕೌಜಲಗಿ ಅವರು ಮೂಲತಃ ಧಾರವಾಡದವರು. ತಮ್ಮ ಪತಿ ದಿವಂಗತ ಅರವಿಂದ ಕೌಜಲಗಿಯವರ ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

**ಶ್ರೀ ಎಂ. ಶಿವರಾಮ ರೈ**



ರಾಷ್ಟ್ರೀಯ ಕ್ರೀಡಾ ಸಂಸ್ಥೆ (ಎನ್.ಇ.ಎಸ್.)ಯಿಂದ ಕ್ರಿಕೆಟ್‌ನಲ್ಲಿ ವಿಶೇಷ ಪದವಿ ಪಡೆದಿದ್ದಾರೆ. ಮಂಗಳೂರು ಮೂಲದ ಇವರು ಭಾರತೀಯ ವಾಯುದಳದಲ್ಲಿ ಸೇವೆಯಲ್ಲಿದ್ದರು. ದೆಹಲಿ ಪಬ್ಲಿಕ್ ಸ್ಕೂಲ್‌ನ ದೈಹಿಕ ಶಿಕ್ಷಕರು ಮಾಜಿ ರಣಜಿ ಆಟಗಾರ. ದೆಹಲಿ ರಾಜ್ಯದ ಕಿರಿಯರ ಕ್ರಿಕೆಟ್ ತಂಡದ ತರಬೇತುದಾರರಾಗಿ ದೆಹಲಿಗೆ ಪ್ರತಿಷ್ಠಿತ ವಿಜಯ್ ಮರ್ಚೆಂಟ್ ಟ್ರೋಫಿ ತಂದು ಕೊಟ್ಟಿದ್ದಾರೆ. ನ್ಯಾಶನಲ್ ಕ್ರಿಕೆಟ್ ಅಕಾಡೆಮಿಯಿಂದ ಉನ್ನತ ತರಬೇತುದಾರರಾಗಿ ಅರ್ಹತೆ ಪಡೆದಿರುವ ರೈ ಅವರು ಭಾರತದ ಶ್ರೇಷ್ಠ ಆಟಗಾರರಾದ ಗಂಭೀರ್ ಮೊದಲಾದವರಿಗೆ ತರಬೇತಿ ನೀಡಿದ ಹೆಗ್ಗಳಿಕೆ ಪಡೆದಿದ್ದಾರೆ. ರೈ ಅವರು ದೆಹಲಿ ಸಂಘದ ಕ್ರೀಡಾ ಸಮಿತಿಯ ಸದಸ್ಯರಾಗಿ ಕ್ರಿಯಾಶೀಲರಾಗಿ ದುಡಿದ್ದಾರೆ.



**ಶ್ರೀ ಪಿ. ರಾಜಣ್ಣ**
ಕರ್ನಾಟಕದ ಚಾಮರಾಜನಗರದ ಬಸವಟ್ಟಿ ಮೂಲದ ಇವರು ಮೈಸೂರಿನ ಪ್ರಸಿದ್ಧ ಶಿಕ್ಷಣ ಸಂಸ್ಥೆ ಜೆ.ಎಸ್.ಎಸ್. ನೋಯ್ಡಾ ಶಾಖೆಯಲ್ಲಿ ಭಾರತ ಸರ್ಕಾರದ ವಿವಿಧ ಮಂತ್ರಾಲಯಗಳ ಅಧಿಕಾರಿಗಳ ಜೊತೆ ಸಂಪರ್ಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆಯಲ್ಲಿ ಇವರು ಕಳೆದ 20 ವರ್ಷಗಳಿಗಿಂತಲೂ ಹೆಚ್ಚು ಬೇರೆ ಬೇರೆ ಕಡೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಸದಾ ಹಸನ್ಮುಖಿಯಾಗಿರುವ ಇವರು ಸ್ನೇಹಪರ ಜೀವಿ.

## ಹೊಸ ಸಮಿತಿಗೆ ಸದಸ್ಯರ ನೇಮಕ

ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಶ್ರೀ ತ್ಯಾಗೇಶ್ ಮೂರ್ತಿ ಮತ್ತು ಶ್ರೀ ಎಸ್. ಪರಮೇಶ್ ಅವರನ್ನು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ನಾಮಾಂಕಿತ ಸದಸ್ಯರುಗಳಾಗಿ ಸೇರ್ಪಡೆಗೊಳಿಸಿದ್ದಾರೆ.



**ಶ್ರೀ ಎಸ್. ಪರಮೇಶ್**
ಗುರುಗಾಂವ್ ಕನ್ನಡ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದರಲ್ಲಿ ಕೆಲಸ ಮಾಡಿರುವ ಶ್ರೀ ಎಸ್. ಪರಮೇಶ್ ಗುರುಗಾಂವ್‌ನಲ್ಲಿ ಹೊಂಡಾ ಮೋಟರ್ಸ್‌ನಲ್ಲಿ ಉದ್ಯೋಗದಲ್ಲಿದ್ದಾರೆ. ಅವರೊಬ್ಬ ಯೋಗ ಪರಿಣಿತರು. ಉತ್ತಮ ಕ್ರಿಕೆಟ್ ಆಟಗಾರರೂ ಆಗಿರುವ ಅವರು ದೆಹಲಿ ಕರ್ನಾಟಕ ಸಂಘದ ಕ್ರೀಡಾಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.

**ಶ್ರೀ ತ್ಯಾಗೇಶ್ ಮೂರ್ತಿ**



ಶ್ರೀ ತ್ಯಾಗೇಶ್ ಮೂರ್ತಿ ಮೂಲತಃ ಮೈಸೂರಿನವರು. ಇವರು 1981ರಿಂದ ದೆಹಲಿಯಲ್ಲಿ ವಾಸವಾಗಿದ್ದು 1982ರಿಂದ ಕರ್ನಾಟಕ ಸರಕಾರದ, ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಆಟೋಟ ಸ್ಪರ್ಧೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ವಹಿಸಿ ಸೇವೆಯನ್ನು ಸಲ್ಲಿಸಿರುತ್ತಾರೆ ಹಾಗೂ ಉತ್ತಮ ಸಂಘಟಕರಾಗಿದ್ದಾರೆ.



# ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು

ಸಂಗೀತ ನಾಟಕ ಅಕಾಡೆಮಿ, ನವದೆಹಲಿ, ದಿನಾಂಕ 24–31 ಅಕ್ಟೋಬರ್ 2015ರಂದು ಸಂಗೀತ, ನಾಟಕ, ಜಾನಪದ ಹಾಗೂ ಇನ್ನಿತರ ಕಲಾ ಪ್ರಕಾರಗಳ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಿತು. 2014ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರಗಳನ್ನು ಪಡೆದ ದೇಶದ ವಿಭಿನ್ನ ಪ್ರದೇಶಗಳಿಗೆ ಸೇರಿದ ಹಿರಿಯ ಕಲಾವಿದರು, ನಿರ್ದೇಶಕರು, ಕಲಾ ವಿಮರ್ಶಕರು ಹಾಗೂ ಸಂಗೀತಗಾರರನ್ನು ಈ ಉತ್ಸವದ ವೇಳೆಯಲ್ಲಿ ಅವರುಗಳ ಕಲಾ ಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲಕ ಗೌರವಿಸಲಾಯಿತು.

ಹೀಗೆ ಗೌರವಿಸಲ್ಪಟ್ಟವರಲ್ಲಿ ಕನ್ನಡಿಗರದ್ದೇ ಸಿಂಹಪಾಲು. ಪುರಸ್ಕೃತರಾದವರಲ್ಲಿ ಕರ್ನಾಟಕದ ಸುಪ್ರಸಿದ್ಧ ಕಲಾಕಾರರು, ನಿರ್ದೇಶಕರು ಮತ್ತು ಕಲಾವಿಮರ್ಶಕರುಗಳಾದ ನೀನಾಸಂ–ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ನಿರ್ದೇಶಕರಾದ ಅಕ್ಷರ ಕೆ.ವಿ., ಯಕ್ಷಗಾನ ಕ್ಷೇತ್ರದಲ್ಲಿ ಅದ್ಭುತ ಕೊಡುಗೆ ನೀಡಿ ತಮ್ಮದೇ ಆದ ಒಂದು ಹೊಸ ಅಲೆಯನ್ನು ಸೃಷ್ಟಿಸಿದ ಮಂಜುನಾಥ್ ಭಾಗವತ್, ಹೊಸ್ತೋಟ, ವಿಶ್ವವಿಖ್ಯಾತ ಚಲನಚಿತ್ರ ಹಾಗೂ ನಾಟಕ ನಿರ್ದೇಶಕರಾದ ಪದ್ಮಶ್ರೀ ಎಂ.ಎಸ್. ಸತ್ಯು, ನೀನಾಸಂ, ರಂಗಶಿಕ್ಷಣ ಕೇಂದ್ರದ ಪ್ರಾಂಶುಪಾಲರಾಗಿ, ಮೈಸೂರು ರಂಗಾಯಣ ನಿರ್ದೇಶಕರಾಗಿ, ಹಾಗೂ ಇನ್ನು ಹಲವಾರು ರಂಗತಂಡಗಳನ್ನು ಮುನ್ನಡೆಸಿದ ಚಿದಂಬರ ರಾವ್ ಜಂಬೆ ಇವರುಗಳನ್ನು ವಿವಿಧ ಕಲಾಪ್ರಕಾರಗಳಿಗೆ ನೀಡಿದ ಅತ್ಯಮೋಘ ಸೇವೆಗಾಗಿ ಸಂಗೀತ ನಾಟಕ ಅಕಾಡೆಮಿಯು ಪುರಸ್ಕರಿಸಿ ಗೌರವಿಸಿತು.

ಈ ಸಂದರ್ಭದಲ್ಲಿ ಮಂಜುನಾಥ್ ಭಾಗವತ್ ಹೊಸ್ತೋಟ, ವಿರಚಿತ ಮತ್ತು ನಿರ್ದೇಶಿಸಿದ 'ಕಾಲಯವನ ಸಂಹಾರ' ಎಂಬ ಯಕ್ಷಗಾನ ಮಾದರಿಯ ಕನ್ನಡ ನಾಟಕವನ್ನು ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ಕರ್ನಾಟಕ ಇದರ ಕಲಾವಿದರು ಬಹಳ ಅದ್ಭುತವಾಗಿ ಪ್ರಸ್ತುತಪಡಿಸಿದರು.

ವಿಶಾಖದತ್ತ ಬರೆದ ಹಿಂದಿ ನಾಟಕ 'ಮುದ್ರಾರಾಕ್ಷಸ'ವನ್ನು ಎಂ.ಎಸ್. ಸತ್ಯುರವರ ನಿರ್ದೇಶನದಲ್ಲಿ ಇಂಪ್ರೆಸ್ಸಾರಿಯೋ ಏಷ್ಯಾ, ದೆಹಲಿ ತಂಡದವರು ಪ್ರಸ್ತುತಪಡಿಸಿದರು.

ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಚಂದ್ರಶೇಖರ ಕಂಬಾರ ಅವರ 'ಶಿವರಾತ್ರಿ' ಕನ್ನಡ ನಾಟಕವನ್ನು ಚಿದಂಬರ ರಾವ್ ಜಂಬೆ ಅವರ ನಿರ್ದೇಶನದಲ್ಲಿ ಮೈಸೂರಿನ ನಿರಂತರ ಫೌಂಡೇಶನ್ ತಂಡದವರು ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿದರು.

ತಮ್ಮ ತಂದೆಯವರಾದ ಕೆ.ವಿ. ಸುಬ್ಬಣ್ಣರ ಗರಡಿಯಲ್ಲಿ ಪಳಗಿದ ಅಕ್ಷರ ಕೆ.ವಿ. ಅವರು ನೀನಾಸಂ, ಹೆಗ್ಗೋಡು ಸಂಸ್ಥೆ ಬೆಳೆದು ಬಂದ ಕ್ರಮವನ್ನು ತಮ್ಮ ಒಂದು ಗಂಟೆ ಕಾಲದ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಮೂಲಕ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪ್ರಸ್ತುತಪಡಿಸಿದರು.

ಈ ಎಲ್ಲ ಕಾರ್ಯಕ್ರಮಗಳಲ್ಲಿ ದೆಹಲಿಯಲ್ಲಿ ವಾಸವಾಗಿರುವ ನೂರಾರು ಕನ್ನಡಿಗರು ಹಾಗೂ ಕನ್ನಡೇತರರು ಅತ್ಯಂತ ಸಂಭ್ರಮದಿಂದ ಭಾಗವಹಿಸಿ ಆನಂದಿಸಿದರು. ಅ

***ಸಖಾರಾಮ ಉಪ್ಪೂರು***





# ಎಚ್. ಸಂಗೀತ ಪ್ರಸಾದ್ ಅವರ

## ಭರತನಾಟ್ಯ ರಂಗಪ್ರವೇಶ

ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರಲ್ಲೊಬ್ಬರಾದ ಡಾ. ಎಚ್.ಎ.ಸಿ. ಪ್ರಸಾದ್ ಅವರ ಪುತ್ರಿ ಎಚ್. ಸಂಗೀತ ಪ್ರಸಾದ್ ಅವರ ಭರತನಾಟ್ಯ ರಂಗಪ್ರವೇಶವು ದಿನಾಂಕ 30.10.2015ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಬಹಳ ಅದ್ದೂರಿಯಿಂದ ನಡೆಯಿತು. ವಿಶ್ವವಿಖ್ಯಾತ ನೃತ್ಯ ಶಿಕ್ಷಕಿ ಪದ್ಮಭೂಷಣ ಡಾ. ಯಾಮಿನಿ ಕೃಷ್ಣಮೂರ್ತಿ, ನಿರ್ದೇಶಕರು 'ಯಾಮಿನಿ ಸ್ಕೂಲ್ ಆಫ್ ಡಾನ್ಸ್' ದೆಹಲಿ, ಅವರ ಗರಡಿಯಲ್ಲಿ ಭರತನಾಟ್ಯವನ್ನು ಮೈಗೂಡಿಸಿಗೊಂಡ ಸಂಗೀತ ಪ್ರಸಾದ್‌ರವರು ಸುಮಾರು ಎರಡು ತಾಸುಗಳ ಕಾಲ ಭರತನಾಟ್ಯದ ವಿವಿಧ ನೃತ್ಯ ಪ್ರಕಾರಗಳನ್ನು ಪ್ರಸ್ತುತಪಡಿಸಿದರು. ಲಂಡನ್‌ನಲ್ಲಿ ವಾಸಿಸುತ್ತಿರುವ ಒಬ್ಬ ಪ್ರತಿಭಾವಂತ ಕಂಪ್ಯೂಟರ್ ಇಂಜೆನಿಯರ್ ಆಗಿರುವ ಶ್ರೀಮತಿ ಸಂಗೀತ ಪ್ರಸಾದ್ ಅವರು ಕರ್ನಾಟಕ ಸಂಗೀತ ಮತ್ತು ಇತರ ಕಲಾಪ್ರಕಾರಗಳಲ್ಲೂ ಪ್ರಾವೀಣ್ಯ ಪಡೆದಿರುತ್ತಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಲಾವಿದೆಯನ್ನು ಆಶೀರ್ವದಿಸಿದ ಶ್ರೀಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ, ಶ್ರೀ ಸುಬ್ರಹ್ಮಣ್ಯ ಮಠ, ಕುಕ್ಕೆ ಸುಬ್ರಹ್ಮಣ್ಯ, ಇವರು ಭರತನಾಟ್ಯ ಕಲೆ, ಸಂಗೀತ ಮತ್ತು ಸಂಸ್ಕೃತಿಯ ಮಹತ್ವದ ಕುರಿತಾಗಿ ಅತ್ಯಂತ ಮಾರ್ಮಿಕವಾಗಿ ನೆರೆದಿದ್ದ ಸಭಿಕರಿಗೆ, ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳಲ್ಲಿ, ಮನಮುಟ್ಟುವಂತೆ ವಿವರಿಸಿ ಹೇಳಿದರು. ಹೆತ್ತವರು ತಮ್ಮ ಮಕ್ಕಳಿಗೆ ನಮ್ಮ ಇಂತಹ ಅತ್ಯಮೂಲ್ಯವಾದ ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸಿ ಅವು ಬೆಳೆದುಕೊಂಡು ಬರುವಂತೆ ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

ಇನ್ನೊಬ್ಬ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತ ಸರ್ಕಾರದ ಆರ್ಥಿಕ ಸಲಹಾಗಾರರಾದ ಡಾ. ಅರವಿಂದ ಸುಬ್ರಹ್ಮಣ್ಯ ಅವರು ಭರತನಾಟ್ಯ ಕಲೆ, ಸಂಸ್ಕೃತಿ ಬಗ್ಗೆ ಸೂಕ್ಷ್ಮವಾಗಿ ಮಾತನಾಡಿ, ಶ್ರೀಮತಿ ಸಂಗೀತ ಅವರ ನೃತ್ಯಕ್ಕೆ ಶುಭ ಹಾರೈಸಿದರು. ಅ

***ಅಭಿಮತ ವರದಿ***

# ಬಸವರಾಜ್ ಎಸ್. ಮೇಟಿಯವರಿಗೆ ಶ್ರದ್ಧಾಂಜಲಿ



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಬಸವರಾಜ್ ಎಸ್. ಮೇಟಿ ಅವರು ಅಲ್ಪ ಕಾಲದ ಅಸೌಖ್ಯದಿಂದ 2015 ಅಕ್ಟೋಬರ್ 3ರಂದು ದೆಹಲಿಯಲ್ಲಿ ಅಸು ನೀಗಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಕೋಶಾಧಿಕಾರಿ ಮತ್ತು ಸದಸ್ಯರಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಕೋಶಾಧಿಕಾರಿ ಮತ್ತು ಉಪಾಧ್ಯಕ್ಷರಾಗಿ ಹಾಗೂ ದೆಹಲಿ ಕನ್ನಡ ಶಾಲೆಯ ಮ್ಯಾನೇಜರರಾಗಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಶ್ರೀ ಮೇಟಿ ಅವರು ದೆಹಲಿಯಲ್ಲಿ ಕನ್ನಡದ ಸಂಘ ಸಂಸ್ಥೆಗಳಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅವರು ಬಸವ ಇಂಟರ್‌ನ್ಯಾಶನಲ್ ಸೆಂಟರ್ ಹಾಗೂ ಶ್ರೀಗಣೇಶ ಮಿತ್ರ ಮಂಡಳಿಯಲ್ಲೂ ಬಹಳಷ್ಟು ಕ್ರಿಯಾಶೀಲರಾಗಿದ್ದರು. ಕರ್ನಾಟಕದ ಗದಗ ಜಿಲ್ಲೆಯವರಾದ ಅವರು ಹಣಕಾಸು ವಿಷಯದಲ್ಲಿ ಸ್ನಾತಕೋತ್ತರ ಪದವೀಧರರಾಗಿ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಹಿರಿಯ ಪ್ರಬಂಧಕರಾಗಿ ಸೇವೆ ಸಲ್ಲಿಸುತ್ತಿದ್ದರು.**

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಬಸವರಾಜ್ ಎಸ್. ಮೇಟಿ ಅವರು ಅಲ್ಪ ಕಾಲದ ಅಸೌಖ್ಯದಿಂದ 2015 ಅಕ್ಟೋಬರ್ 3ರಂದು ದೆಹಲಿಯಲ್ಲಿ ಅಸು ನೀಗಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಕೋಶಾಧಿಕಾರಿ ಮತ್ತು ಸದಸ್ಯರಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಕೋಶಾಧಿಕಾರಿ ಮತ್ತು ಉಪಾಧ್ಯಕ್ಷರಾಗಿ ಹಾಗೂ ದೆಹಲಿ ಕನ್ನಡ ಶಾಲೆಯ ಮ್ಯಾನೇಜರರಾಗಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಶ್ರೀ ಮೇಟಿ ಅವರು ದೆಹಲಿಯಲ್ಲಿ ಕನ್ನಡದ ಸಂಘ ಸಂಸ್ಥೆಗಳಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅವರು ಬಸವ ಇಂಟರ್‌ನ್ಯಾಶನಲ್ ಸೆಂಟರ್ ಹಾಗೂ ಶ್ರೀಗಣೇಶ ಮಿತ್ರ ಮಂಡಳಿಯಲ್ಲೂ ಬಹಳಷ್ಟು ಕ್ರಿಯಾಶೀಲರಾಗಿದ್ದರು. ಕರ್ನಾಟಕದ ಗದಗ ಜಿಲ್ಲೆಯವರಾದ ಅವರು ಹಣಕಾಸು ವಿಷಯದಲ್ಲಿ ಸ್ನಾತಕೋತ್ತರ ಪದವೀಧರರಾಗಿ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಹಿರಿಯ ಪ್ರಬಂಧಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಪಾರ್ಥಿವ ಶರೀರವನ್ನು ಅಂತಿಮ ಸಂಸ್ಕಾರಕ್ಕೆ ತಾಯ್ನಾಡಿಗೆ ಕರೆದುಕೊಂಡು ಹೋಗುವ ಮುನ್ನ ದೆಹಲಿ ಕರ್ನಾಟಕ ಸಂಘದಲ್ಲಿ ಮತ್ತು ದೆಹಲಿ ಕನ್ನಡ ಶಾಲೆಯಲ್ಲಿ ಅವರ ಅಪಾರ ಅಭಿಮಾನಿಗಳು ಅಂತಿಮ ದರ್ಶನ ಮಾಡುವುದಕ್ಕಾಗಿ ಇರಿಸಲಾಯಿತು.

ದೆಹಲಿ ಕರ್ನಾಟಕ ಸಂಘವು ದೈವಾಧೀನರಾದ ಶ್ರೀ ಬಸವರಾಜ್ ಎಸ್. ಮೇಟಿಯವರಿಗೆ ಶ್ರದ್ಧಾಂಜಲಿ ಸಭೆಯನ್ನು ಅಕ್ಟೋಬರ್ 6, 2015ರಂದು ಸಂಘದ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಿತ್ತು. ಸಂಘದ ಪದಾಧಿಕಾರಿಗಳು ಮತ್ತು ಶ್ರೀ ಮೇಟಿಯವರ ಸ್ನೇಹಿತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಅವರ ಅಕಾಲ ಮರಣಕ್ಕೆ ಶೋಕ ವ್ಯಕ್ತ ಪಡಿಸಿದರು.

ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತರಾದ ಸುಪ್ರೀಂ ಕೋರ್ಟಿನ ಹಿರಿಯ ವಕೀಲರಾದ ಶ್ರೀ ಎಸ್.ಎಸ್. ಜವಳಿ ಅವರು ಮಾತನಾಡುತ್ತಾ ದೆಹಲಿಯ ಕನ್ನಡ ಸಂಸ್ಥೆಗಳ ಕುರಿತು ವಿಶೇಷ ಆಸ್ಥೆಯಿದ್ದ ಶ್ರೀ ಮೇಟಿ ಅವರು ಕನ್ನಡಕ್ಕಾಗಿ ಬಹಳಷ್ಟು ಕೆಲಸ ಮಾಡಿದ್ದರು. ಅವರ ಅಕಾಲ ಮರಣದ ಸಂದರ್ಭದಲ್ಲಿ ನಾವು ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಪ್ರಾರ್ಥಿಸೋಣ ಎಂದರು. "ಬಸವರಾಜ ಮೇಟಿ ಅವರಿಗೆ ನನ್ನ ಪರಿಚಯ ಆಗಿದ್ದು ದೆಹಲಿಯೊಳಗೆ. ಆನಂತರ ಗೊತ್ತಾಯ್ತು ಅವರು ನಮ್ಮ ಧಾರವಾಡ ಜಿಲ್ಲೆಯ ಹಾವೇರಿ, ಗದಗದೊಳಗೆ ಬೆಳೆದವರು ಅಂತ. ಆ ಸಮಯದಲ್ಲಿ ನಮ್ಮೂರಿನಿಂದ ಸಿಕ್ಕಿದವರಲ್ಲಿ ಇವರು ಮೊದಲಿಗರು. ಈಗ ತುಂಬಾ ಜನ ಬಂದಿದ್ದಾರೆ. ತುಂಬಾ ಚಿಕ್ಕವರು ಆಗ, ಈಗಲಾದರೂ 49 ವಯಸ್ಸು ಮಾತ್ರ, ಇದು ಸಾವನ್ನಪ್ಪುವ ವಯಸ್ಸು ಅಲ್ಲ, ಇವರ ಅಕಾಲಿಕ ಮರಣವು ಬಹಳ ದುಃಖವನ್ನು ತಂದಿದೆ" ಎಂದರು. ನಾವು ನಮ್ಮ ರಾಜ್ಯ ಬಿಟ್ಟು ಇಷ್ಟು ದೂರ ಬಂದು ನಾನಾ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದೇವೆ. ಮೇಟಿ ಅವರು ಕನ್ನಡದ ವರ್ಚಸ್ಸನ್ನು ಹೆಚ್ಚಿಸುವುದಕ್ಕೆ ಬಹಳಷ್ಟು ಶ್ರಮಿಸಿದರು. ಈಗ ಇಂತಹ ಆಘಾತ ಆದಾಗ ಬಹಳ ನೋವಾಗಿದೆ. ತುಂಬು ಜೀವನ ಅಲ್ಲ ಅವರದ್ದು, ಮಧ್ಯ ಜೀವ ಹೋಗಿ ಒಮ್ಮೆಲೆ ಬ್ರೇಕ್ ಹಾಕಿದ್ಹಾಂಗೆ ಆಯಿತು ನನಗೆ. ಅವರ ಕುಟುಂಬಕ್ಕೆ ಎಷ್ಟು ತೊಂದರೆ ಆಗಿರಬೇಕು ಬಾರಿ ದೊಡ್ಡ ಆಘಾತ ಇದು ಎಂದು ಶ್ರೀ ಜವಳಿ ಅವರು ದುಃಖಿಸಿದರು.

ಸಂಘದ ಮಾಜಿ ಅಧ್ಯಕ್ಷ ಹಿರಿಯ ಕನ್ನಡಿಗ ಶ್ರೀ ಐ. ರಾಮಮೋಹನ್ ರಾವ್ ಅವರು ಮಾತನಾಡುತ್ತ ಮೇಟಿಯವರ ಪರಿಚಯ ಸಂಘದಲ್ಲೇ ಆಗಿತ್ತು. ಏನೂ ಸಹಾಯ ಕೇಳಿದ್ರೂ ಮಾಡುತ್ತಿದ್ದರು. ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಅವರ ಕೊಡುಗೆ ಅಪಾರ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾರೈಸಿದರು.

ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡುತ್ತಾ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಶ್ರೀ ಬಸವರಾಜ ಎಸ್. ಮೇಟಿ ಅವರು ನಾವು ಕಲ್ಪನೆ ಮಾಡದ ಹಾಗೆ ಇದ್ದಕ್ಕಿದ್ದಂತೆ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸಿದರು. ಜೊತೆಗೆ ಅವರ ಕುಟುಂಬಕ್ಕೆ ಆ ದುಃಖವನ್ನು ಸಹಿಸುವಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಬೇಡಿಕೊಂಡರು. ಶ್ರೀ ಬಸವರಾಜ ಎಸ್. ಮೇಟಿಯವರನ್ನು ನಾನು ಬಹಳಷ್ಟು ವರ್ಷಗಳಿಂದ ಬಲ್ಲೆ. ನಮ್ಮ ಅಭಿಪ್ರಾಯದಲ್ಲಿ ಬಹಳಷ್ಟು ಭಿನ್ನತೆಗಳಿತ್ತು. 'ಅವರೊಬ್ಬ ಛಲಗಾರ, ಯಾವತ್ತೂ ಮಾತಿಗೆ ತಪ್ಪುತ್ತಿರಲಿಲ್ಲ' ಎಂದರು. ನಾವು ಇಷ್ಟು ವರ್ಷದಿಂದ ಪರಸ್ಪರ ಸ್ಪರ್ಧಿಗಳಾಗಿದ್ದರೂ ಕೂಡಾ 4–5 ವರ್ಷಗಳ ಹಿಂದೆ ನಾನು ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಸಿ.ವಿ. ಗೋಪಿನಾಥ್ ಅವರ ಜೊತೆಗೆ ಸ್ಪರ್ಧಿಸಿದಾಗ ಮೇಟಿಯವರು ಕೂಡಾ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಸಲ್ಲಿಸಿ ಆದ ನಂತರ 'ಶೆಟ್ರೆ ನಾನು ಕಂಟೆಸ್ಟ್ ಮಾಡಲ್ಲ, ನಾನು ವಾಪಸು ತಗೋತಿನಿ' ಅಂದಾಗ ನೀವು ತಮಾಷೆ ಮಾಡಬೇಡಿ ಸಾರ್, ಯಾವಾಗಲೂ ಹೀಗೆ ಹೇಳುವುದು ನೀವು ಎಂದು ನಾನು ಅಂದೆ. ಆದರೆ ನಾಮಪತ್ರವನ್ನು ವಾಪಾಸು ತೆಗೆದುಕೊಳ್ಳುವ ದಿವಸ, ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಪತ್ರವನ್ನು ಅವರು ನನ್ನ ಕೈಗೇ ಕೊಟ್ಟಿದ್ದರು. ಅವರು ತಾನು ಹೇಳಿದ ಹಾಗೆ ಮಾಡಿದರು. ಅವರು ಛಲವಾದಿ, ಏನನ್ನು ಹೇಳುತ್ತಾರೆಯೋ ಅದನ್ನು ಮಾಡಿ ತೋರಿಸುತ್ತಾರೆ, ಎಂದು ಶ್ರೀ ಬೆಳ್ಳಾರೆ ಅವರು ನೆನಪಿಸಿಕೊಂಡರು.

ಮೇಟಿಯವರಿಗೆ ಕನ್ನಡದ ಸಂಘ ಸಂಸ್ಥೆಗಳ ಬಗ್ಗೆ ಬಹಳ ಕಳಕಳಿ ಇತ್ತು. ಮೇಟಿಯವರು ಹೆಚ್ಚಾಗಿ ಹಣಕಾಸಿನ ವಿಷಯದಲ್ಲಿ ಪ್ರಶ್ನಿಸುತ್ತಿದ್ದರು. ಬಹಳಷ್ಟು ಸಲ ನಾನು ಕಾರ್ಯಕಾರಿ ಸಮಿತಿಯಲ್ಲಿ ಹಿಂದೆ ಪ್ರಭಾರ ಅಧ್ಯಕ್ಷರಾಗಿದ್ದಾಗ ಕೂಡಾ ಅವರು ಹೇಳಿದ ಬಹಳಷ್ಟು ಸಲಹೆಗಳನ್ನು ಸ್ವೀಕರಿಸಿದ್ದೇನೆ ಎಂದು ಅವರು ನುಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮಾತಾಡುತ್ತಾ 2014–15ನೇ ಸಾಲಿನ ಕೊನೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದ ಶ್ರೀ ಮೇಟಿಯವರು ಶ್ರೀ ಎಸ್.ಎಸ್. ಜವಳಿ ಅವರ ಜೊತೆ ಮಾತನಾಡುತ್ತಿದ್ದಾಗ ನನ್ನ ಆರೋಗ್ಯ ಚೆನ್ನಾಗಿಲ್ಲ ಎಂದು ಹೇಳಿದ್ದರು. ಇದೇ ಕಾರಣಕ್ಕಾಗಿ ಅವರಿಗೆ ಡಾಕ್ಟರ್ ಮೂರು ತಿಂಗಳು ಬೆಡ್ ರೆಸ್ಟ್ ಮಾಡಬೇಕೆಂದು ಸೂಚಿಸಿದ್ದರು. ಆದರೆ ಅವರು ಆರಾಮ ಮಾಡಲೇ ಇಲ್ಲ, ಹಾಗಾಗಿ ಅವರು ಈ ಅರೆ ವಯಸ್ಸಿನಲ್ಲೇ ನಮ್ಮನ್ನು ಅಗಲುವಂತಾಯಿತು ಎಂದು ತನ್ನ ದುಃಖವನ್ನು ವ್ಯಕ್ತಪಡಿಸಿದರು.

ಸಂಘದ ಕೋಶಾಧಿಕಾರಿ ಡಾ.

ಅವನೀಂದ್ರನಾಥ್ ರಾವ್ ಅವರು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಶ್ರೀ ಬಸವರಾಜ ಮೇಟಿಯವರನ್ನು ನಾನು ಕಳೆದ 14 ವರ್ಷಗಳಿಂದ ನೋಡ್ತಾ ಇದ್ದೇನೆ. ಹೆಚ್ಚಾಗಿ ನಾನು ಅವರನ್ನು ಗಮನಿಸಿದ್ದು ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡುತ್ತಿರುವುದನ್ನು. ಯಾವುದೇ ಆಡಳಿತ ಮಂಡಳಿ ಬರಲಿ ಬಸವರಾಜ ಮೇಟಿಯವರು ಮಾತನಾಡುತ್ತಾರೆಂಬುದು ಗೊತ್ತಿರುತ್ತಿತ್ತು. ಸಭೆಗೆ ಅಷ್ಟೇ ತಯಾರಾಗಿ ಬರುತ್ತಿದ್ದರು. ಮುಖ್ಯವಾಗಿ ಅವರ ಪ್ರಶ್ನೆಗಳು ಹಣಕಾಸಿನ ವಿಷಯವಾಗಿತ್ತು. ಅಕ್ಟೋಬರ್ 2ರ ವಾರ್ಷಿಕ ಸರ್ವ ಸಭೆಯ ಮೊದಲು ಅವರು ನನ್ನಲ್ಲಿ ಫೋನು ಮುಖಾಂತರ ಮಾತನಾಡಿದ ಮಾತುಗಳು, ಸಂಘದ ಲೆಕ್ಕಪತ್ರಗಳನ್ನು ನೀಡುವಂತೆ ಮಾಡಿದ ಇಮೇಲ್‌ಗಳನ್ನು ತಿಳಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಬೇಕಾಗುತ್ತದೆ, ಮಾತನಾಡುವವರು, ಕೇಳುವವರು ಬೇಕಾಗಿತ್ತು ಅವರು ನಮ್ಮನ್ನು ಅಗಲಿದ್ದು ಬಹಳ ದುಃಖದ ಸಂಗತಿ ಎಂದರು.

ಶ್ರೀ ಸಖಾರಾಮ ಉಪ್ಪೂರು ಅವರು ಮಾತಾಡುತ್ತಾ, ಮೇಟಿಯವರು ಮೊದಲಿನಿಂದಲೂ ನನಗೆ ಪರಿಚಯ. ದಿ. ಕೆ.ಆರ್. ನಾಗರಾಜ, ಶ್ರೀ ಎಸ್. ಕೃಷ್ಣ ಭಟ್, ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರಂತಹ ಹಲವಾರು ಕನ್ನಡದ ಸಂಘಟಕರು, ಕನ್ನಡಕ್ಕಾಗಿ ಹೋರಾಡುವವರಲ್ಲಿ ಮೇಟಿಯವರು ಸಹ ಒಬ್ಬರಾಗಿದ್ದರು. ಹೀಗೆ ಕನ್ನಡದ ಸಂಘ ಸಂಸ್ಥೆಗಳ ಎಲ್ಲಾ ಚಟುವಟಿಕೆಗಳಲ್ಲಿ ತನ್ನನ್ನು ಅತ್ಯಂತ ಆಳವಾಗಿ ತೊಡಗಿಸಿಕೊಂಡಿದ್ದರು. ಅವರು ಮಾತನಾಡುವ ರೀತಿ ವಿಶಿಷ್ಟವಾಗಿತ್ತು. ಪ್ರತಿಯೊಂದು ವಾರ್ಷಿಕ ಮಹಾಸಭೆಗಳಲ್ಲಿ ಹಣಕಾಸಿನ ಕುರಿತಂತೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಅವರು ಎತ್ತುತ್ತಿದ್ದರು. ಆ ಮೂಲಕ ಸಂಘ ಸಂಸ್ಥೆಗಳ ಆರ್ಥಿಕ ಸ್ಥಿತಿ ಹದಗೆಡದಂತೆ ಸದಾ ನಮ್ಮೆಲ್ಲರನ್ನು ಜಾಗರೂಕರನ್ನಾಗಿ ಮಾಡುತ್ತಿದ್ದರು. ಒಳ್ಳೆ ಸಂಘಟಕರೂ, ತಿಳುವಳಿಕೆಯುಳ್ಳವರೂ, ಬುದ್ಧಿವಂತರೂ ಆದ ಮೇಟಿ ಅವರನ್ನು ಕಳಕೊಂಡ ದುಃಖ. ಯಾಕಂದ್ರೆ ಇದು ಅವರು ಸಾಯೋ ವಯಸ್ಸಲ್ಲ, ಕರ್ನಾಟಕದಿಂದ ಬಂದವರಿಗೆ ಮೇಟಿ ಅವರು ಒಂದು ದೊಡ್ಡ ಶಕ್ತಿಯಾಗಿದ್ದರು. ಬಹಳ ಜನರಿಗೆ ಸಹಾಯ ಮಾಡಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಗು-ಹೋಗುಗಳ ಬಗ್ಗೆ ಹಲವಾರು ಬಾರಿ ನನ್ನೊಡನೆ ಗಂಟೆಗಟ್ಟಲೆ ಚರ್ಚಿಸಿದ್ದಾರೆ. ಸಂಘದ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದ ಹಂತದಲ್ಲಿ ಕೂಡ ಮೇಟಿ ಅವರು ಬಹಳಷ್ಟು ಶ್ರಮಿಸಿದ್ದಾರೆ. ಒಳ್ಳೆಯ ಸ್ನೇಹಿತ, ಹಠವಾದಿ, ಹಿಡಿದ ಕೆಲಸವನ್ನು ಕೂಲಂಕುಷವಾಗಿ ವಿಮರ್ಶಿಸಿ ಅಚ್ಚುಕಟ್ಟಾಗಿ ಮುಗಿಸುವಂತಹ ಬಹಳ ಒಳ್ಳೆಯ ವ್ಯಕ್ತಿತ್ವ ಅವರದ್ದು. ಶ್ರೀ ಉಪ್ಪೂರು ಅವರು ಪರಮಾತ್ಮ ಅವರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಅವರ ಮನೆಯವರಿಗೂ ಸ್ನೇಹಿತರಿಗೂ ಅವರ ಅಗಲುವಿಕೆಯ ದುಃಖವನ್ನು ಸಹಿಸುವ ಧೈರ್ಯ ಕೊಡಲಿ ಎಂದು ಹಾರೈಸಿದರು.

ಶ್ರೀ ಚೆನ್ನು ಎಸ್. ಮಠದ ಅವರು ಮಾತಾಡುತ್ತಾ ಶ್ರೀ ಎಸ್.ಕೆ. ಭಟ್ ಪ್ರಧಾನ ಕಾರ್ಯದರ್ಶಿಯಾಗಿದ್ದು, ಶ್ರೀ ಬಿ.ಪಿ. ಉತ್ತಪ್ಪನವರು ಕೋಶಾಧಿಕಾರಿಯಾಗಿದ್ದ ಸಮಯದಲ್ಲಿ ಮೇಟಿಯವರು ಒಳ್ಳೆ ಉತ್ಸಾಹಿ ತರುಣರಾಗಿದ್ದರು, ಏನಾದರೂ ಸಾಧಿಸಬೇಕು ಎಂದು ಬಂದಿದ್ದರು. ಅವರನ್ನು ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ನಾನು ನನ್ನ ಮನೆಯಿಂದಲೇ ಪ್ರೋತ್ಸಾಹಿಸಿದೆ. ಅವರು ಸಂಘ ಸಂಸ್ಥೆಗಳಿಗೆ ತುಂಬಾನೇ ಅಂಟಿಸಿಕೊಂಡರು ಎಂದು ನನಗನ್ನಿಸುತ್ತದೆ ಎಂದರು. ಸಂಘ ಸಂಸ್ಥೆಗಳಿಗೆ ಕೆಲಸ ಮಾಡಬೇಕು, ತಮ್ಮ ದೇಹ ಸ್ಥಿತಿ ಮತ್ತು ಕುಟುಂಬ ಎರಡಕ್ಕೂ ಅಷ್ಟೇ ಕಾಳಜಿ ಕೊಡಬೇಕಾಗಿತ್ತು. ಅಲ್ಲೆಲ್ಲೋ ತಪ್ಪು ಮಾಡಿದ್ರು ಎಂದು ಮನಸ್ಸಿನ ನೋವನ್ನು ಹಂಚಿದರು. ಅವರು ಇನ್ನೂ ಬದುಕಬೇಕಿತ್ತು. ನೇರ ಮತ್ತು ದಿಟ್ಟ ವ್ಯಕ್ತಿ ಯಾವ ಕೆಲಸಕ್ಕೂ ಒಮ್ಮೆ ತಮ್ಮ ಮನಸ್ಸಿನಿಂದ ಒಪ್ಪಿಕೊಂಡ್ರೆ ಕೈಬಿಡದೆ ಸತತವಾಗಿ ಅದಕ್ಕಾಗಿ ಶ್ರಮಿಸುವಂತಹ ದಿಟ್ಟ ವ್ಯಕ್ತಿ ಅವರಾಗಿದ್ದರು. ಅವರಿಗೆ ನನ್ನ ನಮನ ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಹಾರೈಸಿದರು.

ಶ್ರೀ ವಿ.ವಿ. ಬಿರಾದಾರ ಅವರು ಮೇಟಿಯವರು ನನ್ನ ಆತ್ಮೀಯ ಮಿತ್ರರು. 1992ರಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದಾಗ ಅವರ ಭೇಟಿಯಾಗಿತ್ತು. 21.07.1966 ರಂದು ಜನಿಸಿದ ಮೇಟಿ ಅವರು 49 ವರ್ಷ 3 ತಿಂಗಳು ಬದುಕಿದ್ದರು. ಆ ಬದುಕಿನ ನಡುವೆ ಅವರು ಸುಮಾರು ಕೆಲಸಗಳನ್ನು ಮಾಡಿದ್ದರು. ದೆಹಲಿಗೆ ಬಂದು ಸುಮಾರು 25 ವರ್ಷ ಸತತವಾಗಿ ಕನ್ನಡ, ಕನ್ನಡ ತಾಯಿಗಾಗಿ, ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಾಗಿ ಬಹಳ ಕೆಲಸಗಳನ್ನು ಮಾಡಿದ್ದರು. ದಿ. ಕೆ.ಆರ್. ನಾಗರಾಜ ಅವರ ಜೊತೆಯಲ್ಲಿ ನಾವಿರುವಾಗ ಅವರು ಒಟ್ಟೊಟ್ಟಿಗೆ ಕೆಲಸ ಮಾಡುವುದನ್ನು ನೋಡಿದ್ದೇನೆ, ಅವರು ಸದಾ ಕನ್ನಡಕ್ಕಾಗಿ ಹುರಿದುಂಬಿಸುವ ಕೆಲಸವನ್ನು ಮಾಡುತ್ತಿದ್ದರು. ಯಾವುದೇ ಹಣಕಾಸಿನ ಅಂಕಿ-ಅಂಶಗಳಲ್ಲಿ ತಪ್ಪಿದ್ದರೆ ನಾಗರಾಜ ಸಾಹೇಬರಿಗೆ ಹೇಳುತ್ತಿದ್ದರು. "ನೋಡಿ ಇದು ತಪ್ಪಾಗುತ್ತಿದೆ, ನೋಡಿ ಸರ್ ಸರಿಪಡಿಸಬೇಕು" ಎನ್ನುವಂತಹ ಮಾತನ್ನು ಅವರು ಹೇಳುತ್ತಿದ್ದರು. ಅವರಿಗೆ ದೇಹ, ಹೆಂಡತಿ, ಮಕ್ಕಳು, ಮನೆ ಅಂತ ಬೇಕಾಗಿರಲಿಲ್ಲ, ಸಂಘ-ಸಂಸ್ಥೆಗಳಿಗೋಸ್ಕರ, ಸಮಾಜಕ್ಕೋಸ್ಕರ ಹಗಲಿರುಳು ದುಡಿದರೆಂದು ಹೇಳಿದ್ರೂ ತಪ್ಪಾಗಲಿಕ್ಕಿಲ್ಲ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಖಜಾಂಚಿಯಾಗಿ, ಸದಸ್ಯರಾಗಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮ್ಯಾನೇಜಿಂಗ್ ಕಮಿಟಿಯ ಸದಸ್ಯರಾಗಿ, ಕೋಶಾಧಿಕಾರಿಯಾಗಿ, ಉಪಾಧ್ಯಕ್ಷರಾಗಿ ಮತ್ತು ದೆಹಲಿ ಕನ್ನಡ ಶಾಲೆಯ ಮ್ಯಾನೇಜರ್ ಆಗಿ ಅತ್ಯುತ್ತಮ ಕೆಲಸಗಳನ್ನು ತನ್ನ ದೇಹ ಎಷ್ಟು ತೊಂದರೆಯಲ್ಲಿದ್ದರೂ ಕೂಡಾ ಮಾಡಿದ್ದರು. ಅವರ ಮನೆಯವರು "ನೋಡಿ ಒಂದೇ ಒಂದು ಮಗಳು ಇದೆ, ನೀವು ನಮ್ಮನ್ನು ಬಿಟ್ಟು ಈ ರೀತಿ ಮಾಡ್ಲಿಕ್ಕೆ ಹೋಗ್ಬೇಡಿ, ಅಂತ ಅತ್ತು ಕರೆದು ಹೇಳಿದ್ದರು". ಅವರು ನಮ್ಮ ಮನೆಯ ಬಂಧುಗಳಾಗಿಯೇ ಇದ್ರು. ಕೊನೆಯವರೆಗೂ ಅವರಿಗೂ ನನಗೂ ವಿಚಾರಗಳು ಬೇರೆ ಇದ್ದರೂ ಕೂಡ ಸಿದ್ಧಾಂತಗಳ ಬಗ್ಗೆ ಅವರು ಚರ್ಚಿಸುತ್ತಿದ್ದರು. ಒಂದು ಕೆಲಸ ಸರಿಯೆನಿಸಿದರೆ ಅದನ್ನು ಕೊನೆಯವರೆಗೂ ಬಿಡುತ್ತಿರಲಿಲ್ಲ. ಕೊನೆಗೆ ನಮಗೆ ಸರಿ ಹೇಳದಿದ್ದರೂ ಕೂಡಾ, ಕೋರ್ಟಿನಿಂದ ಸರಿಮಾಡಿಸಬೇಕೆಂದು ಧೈರ್ಯ ಮಾಡುತ್ತಿದ್ದರು. ಕೊನೆಗೂ ತಮ್ಮ ವಿಚಾರದಂತೆಯೇ ನಮ್ಮ ಸಮಾಜಕ್ಕಾಗಿ, ಕನ್ನಡಕ್ಕಾಗಿ ದುಡಿದರು. ಅವರ ಕುಟುಂಬಕ್ಕೆ, ಮಿತ್ರ ವೃಂದಕ್ಕೆ ದೇವರು ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ಹಾರೈಸಿದರು.

ಶ್ರೀ ಸುಧೀರ್ ಫಡ್ನೀಸ್ ಅವರು ಮಾತಾಡುತ್ತಾ ಬಸವರಾಜ ಮೇಟಿಯವರು ತುಂಬಾ ಸ್ನೇಹಿತರಾಗಿದ್ದರು. ಗಣೇಶ ಮಿತ್ರ ಮಂಡಳಿಯಿಂದ ಅವರ ಪರಿಚಯವಾಗಿತ್ತು. ಗಣೇಶ ಹಬ್ಬ ಬಂದಾಗ ಗಣೇಶ ಮಂಟಪದ ವಿನ್ಯಾಸವನ್ನು ನೀವೇ ಮಾಡಬೇಕು ಎಂದು ಹೇಳುತ್ತಿದ್ದರು. ಈ ಬಾರಿಯ ಗಣೇಶ ಪೂಜೆಯ ಸಂದರ್ಭದಲ್ಲೂ ರಾತ್ರಿ ಬಂದು ಕೂತಿದ್ದರು. ನಾವೇ ಒತ್ತಾಯಮಾಡಿ ಮನೆಗೆ ಕಳುಹಿಸಿದ್ದನ್ನು ನೆನಪಿಸುತ್ತಾ ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿದರು.

ಶ್ರೀ ಎಸ್.ಕೆ. ಆನಂದ್‌ರಾಮ್ ಅವರು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ, ಮೇಟಿಯವರು ನನಗೆ 1991ರಿಂದಲೇ ಪರಿಚಯವಾಗಿತ್ತು. ಜನಕಪುರಿಯಲ್ಲಿ ನಾವು ರೂಮ್‌ಮೇಟ್ಸ್ ಆಗಿದ್ದೆವು. ಆ ಸಮಯದಿಂದಲೇ ಅವರಿಗೆ ಬರೆಯುವುದು ಮತ್ತು ಸಂಘ-ಸಂಸ್ಥೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವುದು ರೂಢಿಯಾಗಿತ್ತು. ಮೇಟಿ ಅವರು ಅತ್ಯಂತ ಸರಳ ಜೀವಿ ಹಾಗೂ ಇತರರಿಗೆ ಸಹಾಯ ಮಾಡುವ ಸ್ನೇಹಪರರಾಗಿದ್ದರು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಚುನಾವಣೆಯಲ್ಲಿ ಹಾಗು ಆಡಳಿತದಲ್ಲಿ ಅವರು ಬಹಳ ಶ್ರದ್ಧೆಯಿಂದ ಭಾಗವಹಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ತಮ್ಮ ಆರೋಗ್ಯ ಸರಿಯಾಗಿಲ್ಲದಿದ್ದರೂ ಕೊನೆಯವರೆಗೂ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ಸಂಘದ ಏಳಿಗೆಗಾಗಿ ಸದಾ ಚಿಂತಿಸುತ್ತಿದ್ದರು. ಅವರ ಅಕಾಲಿಕ ಮರಣಕ್ಕಾಗಿ ಶೋಕ ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾರೈಸಿದರು. ಅ

***ಅಭಿಮತ ವರದಿ***

## ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ನೂತನ ಪದಾಧಿಕಾರಿಗಳು



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವಾರ್ಷಿಕ ಮಹಾಸಭೆಯು ಇದೇ ಅಕ್ಟೋಬರ್ 18ರಂದು ನಡೆಯಿತು. ಸಭೆಯಲ್ಲಿ ಸಮಿತಿಯ ಸದಸ್ಯರೆಲ್ಲರೂ ಭಾಗವಹಿಸಿ ಕಾರ್ಯ ಕಲಾಪಗಳ ಬಗ್ಗೆ ಚರ್ಚಿಸಿದರು. ಮುಂದಿನ ಎರಡು ವರ್ಷಗಳ ಅವಧಿಗೆ ನೂತನ ಆಡಳಿತ ಮಂಡಳಿಯನ್ನು ಸಭೆಯಲ್ಲಿ ಸೇರಿದ ಸದಸ್ಯರು ನೇಮಕ ಮಾಡಿದರು.

ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ನೂತನ ಪದಾಧಿಕಾರಿಗಳು: ಶ್ರೀ ಸಿದ್ದಲಿಂಗಪ್ಪ (ಅಧ್ಯಕ್ಷರು), ಶ್ರೀ ಎ.ಟಿ. ಶ್ರೀನಿವಾಸ (ಪ್ರಧಾನ ಕಾರ್ಯದರ್ಶಿ), ಶ್ರೀ ಆರ್.ಎ. ವೆಂಕಟೇಶ್ (ಉಪಾಧ್ಯಕ್ಷರು), ಶ್ರೀ ಜಯರಾಮ್ (ಖಜಾಂಚಿ), ಶ್ರೀ ಪುರುಷೋತ್ತಮ ಎಂ. (ಜಂಟಿ ಕಾರ್ಯದರ್ಶಿ). ಅ

***ಎಸ್. ಗಿರೀಶ್***

# ಗ್ರೀಕ್ ದುರಂತ ನಾಟಕ ಅಂತಿಗೊನೆಯ ಯಶಸ್ವೀ ಪ್ರಯೋಗ

ಹೆಸರಾಂತ ಗ್ರೀಕ್ ದುರಂತ ನಾಟಕ 'ಅಂತಿಗೊನೆ'ಯ ಕನ್ನಡ ರೂಪಾಂತರವನ್ನು ಅಕ್ಟೋಬರ್ 18ರಂದು ದೆಹಲಿ ಕರ್ನಾಟಕ ಸಂಘದ ರಂಗದ ಮೇಲೆ, ನುರಿತ ಹಾಗೂ ಖ್ಯಾತ ನಿರ್ದೇಶಕ ಬಾಲಕೃಷ್ಣ ನಾಯ್ಕ್, ಯಶಸ್ವಿಯಾಗಿ ಪ್ರಯೋಗಿಸಿದರು.

ಪಿ. ಲಂಕೇಶ್‌ರವರು ಕನ್ನಡಕ್ಕೆ ಅನುವಾದಿಸಿದ್ದ, ಕ್ರಿಸ್ತ ಪೂರ್ವ 441ರಲ್ಲಿ ಸೊಫೋಕ್ಲಿಸ್ ಬರೆದ, ಈ ನಾಟಕವನ್ನು ಯುವ ಕಲಾವಿದರುಗಳನ್ನೊಳಗೊಂಡ 'ಕೆಂಪು ಕೋಟೆ' ತಂಡ ಪ್ರದರ್ಶಿಸಿತು.

ಈಡಿಪಸ್‌ನ ಅಂತ್ಯದಿಂದ ಅಂತಿಗೊನೆ ಪ್ರಾರಂಭಗೊಳ್ಳುತ್ತದೆ. ಈಡಿಪಸ್ ಮರಣಾನಂತರ ಕೂಡಲೆ ಅಂತಿಗೊನೆ ಮತ್ತು ಅವಳ ತಂಗಿ ಇಸ್ಮೇನೆ ಅವರ ಸಹೋದರರಾದ ಪಾಲಿನ್ಯೆಕಸ್ ಮತ್ತು ಎತೆಯೋಕ್ಲಸ್ ಸಹಾಯ ಮಾಡಲು ನಿರ್ಧರಿಸಿ ಹಾಗೂ 'ಸಹೋದರರಿಬ್ಬರು ಥೀಬ್ಸ್‌ನ ಸಿಂಹಾಸನಕ್ಕಾಗಿ ಕಾದಾಡಿ ಸಾಯುತ್ತಾರೆ' ಎನ್ನುವ ದೇವವಾಣಿಯ ನಿರ್ಧಾರವನ್ನು ತಪ್ಪಿಸಲು ತೀರ್ಮಾನಿಸಿ ಥೀಬ್ಸ್‌ಗೆ ವಾಪಾಸ್ಸಾಗುತ್ತಾರೆ.

ಥೀಬ್ಸ್‌ಗೆ ಮರಳಿದ ನಂತರ ಅಂತಿಗೊನೆಗೆ ಅವಳ ಇಬ್ಬರೂ ಸಹೋದರರು ಸತ್ತಿರುವ ವಿಷಯ ಗೊತ್ತಾಗುತ್ತದೆ. ಎತೆಯೋಕ್ಲೆಸ್‌ನ ಶವ ಸಂಸ್ಕಾರ ರೀತಿ ನೀತಿಯಾಗಿ ನಡೆದಿರುತ್ತದೆ. ಆದರೆ ವಂಶಪಾರಂಪರ್ಯದಂತೆ ಥೀಬ್ಸ್‌ನ ಸಿಂಹಾಸನವನ್ನು ಏರಿದ ಕ್ರೆಯಾನ್ ಪಾಲಿನ್ಯೆಕಸ್‌ನ ಅಂತ್ಯ ಸಂಸ್ಕಾರವನ್ನು ಯಾರೂ ಮಾಡದಂತೆಯೇ ನಿಷೇಧಿಸಿ ರಾಜಾಜ್ಞೆಯನ್ನು ಹೊರಡಿಸಿರುತ್ತಾನೆ. ಅವನನ್ನು ದೇಶದ್ರೋಹಿ ಎಂದು ಭಾವಿಸಿರುತ್ತಾನೆ.

ರಾಜಾಜ್ಞೆಯನ್ನು ತಿರಸ್ಕರಿಸಿ ಸಹೋದರನನ್ನು ಅಂತಿಗೊನೆ ಮಣ್ಣು ಮಾಡುತ್ತಾಳೆ ಮತ್ತು ಸಿಕ್ಕಿಹಾಕಿಕೊಳ್ಳುತ್ತಾಳೆ. ದೂರದ ಗುಹೆಯೊಂದರಲ್ಲಿ ಅವಳನ್ನು ಕ್ರೆಯಾನ್ ಬಂಧಿಸಿಡುತ್ತಾನೆ. ಅವಳು ಅಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅಂತಿಗೊನೆ ತನ್ನ ಜೀವವನ್ನು ತಾನೇ ಅಂತ್ಯಗೊಳಿಸಿಕೊಂಡಿದ್ದು ತಿಳಿಯದೇ ಇದ್ದ ಕುರುಡ ದೇವದೂತ ಟೈರೀಸಿಯಸ್, ಕ್ರೆಯಾನ್‌ನ ಮಗ, ಅಂತಿಗೊನೆಯ ಪ್ರಿಯಕರ ಹಯ್‌ಮೋನ್ ಮತ್ತು ಚೋರಸ್ ಅಂತಿಗೊನೆಯನ್ನು ಬಂಧನದಿಂದ ಬಿಡುಗಡೆಗೊಳಿಸುವಂತೆ ಕ್ರೆಯಾನ್‌ನನ್ನು ಬಹಳವಾಗಿ ಬೇಡಿಕೊಳ್ಳುತ್ತಾರೆ.

ಕ್ರೆಯಾನ್ ವಸ್ತುಸ್ಥಿತಿಯನ್ನು ಅರಿತುಕೊಳ್ಳುವಲ್ಲಿ ತುಂಬಾ ತಡಮಾಡಿದ್ದರಿಂದ ಅವಳು ಜೈಲಿನಲ್ಲಿಯೇ ಸತ್ತಿರುವುದನ್ನು ಕಾಣುತ್ತಾನೆ. ಅಂತಿಗೊನೆ ಸತ್ತಿರುವ ವಿಷಯವನ್ನು ತಿಳಿದು ಬೇಸತ್ತ ಹೇಮನ್ ಮತ್ತು ಕ್ರಯಾನ್‌ನ ಹೆಂಡತಿ ಇಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕ್ರಯಾನ್ ಯಾತನೆ ಮತ್ತು ದುಃಖದಲ್ಲಿ ಮುಳುಗಿ ಹೋಗುತ್ತಾನೆ.

ಈ ನಾಟಕವನ್ನು ಪ್ರಪಂಚದಾದ್ಯಂತ ಬೇರೆ ಬೇರೆ ನಿರ್ದೇಶಕರು ಬೇರೆ ಬೇರೆ ರೀತಿಯಲ್ಲಿ ನಿರ್ದೇಶಿಸಿದ್ದಾರೆ. ಆದರೆ ಬಾಲಕೃಷ್ಣ ನಾಯ್ಕ್‌ರಿಗೆ ಈ ನಾಟಕ ರಾಜ್ಯದ ಅಧಿಕಾರಕ್ಕಾಗಿ ನಡೆದ ಮುಖ್ಯ ಪಾತ್ರದ ಕ್ರೆಯಾನ್ (ಪ್ರಕಾಶ್ ಶೆಟ್ಟಿ) ಇನ್ನೊಂದು ಮುಖ್ಯ ಪಾತ್ರವಾದ ಅಂತಿಗೊನೆ (ಪೃಥ್ವಿ ಕಾರಿಂಜೆ) ಇಬ್ಬರ ನಡುವೆ ನಡೆದ ಘರ್ಷಣೆ, ಹಾಗಾಗಿ ಬೇರೆಲ್ಲಾ ನಾಟಕಗಳಿಗಿಂತ ಇದು ವಿಭಿನ್ನವಾಗಿತ್ತು.

ಕ್ರೆಯಾನ್ ಕಾನೂನು ಸರಿಯಾದ ರೀತಿಯಲ್ಲಿ ಅನುಷ್ಠಾನವಾಗಬೇಕೆಂದು ಬಯಸುತ್ತಾನೆ, ಅಂತಿಗೊನೆ ತನ್ನ ಸಹೋದರನ ಶವಸಂಸ್ಕಾರ ಸರಿಯಾದ ರೀತಿಯಲ್ಲಿ ಆಗಬೇಕೆಂದು ಬಯಸುತ್ತಾಳೆ.

'ಮನೋರಂಜನೆಯ ಜೊತೆ ಜೊತೆಗೆ ವಿಚಾರಗಳನ್ನು ಅಭಿವ್ಯಕ್ತಿಗೊಳಿಸಲು ರಂಗಭೂಮಿ ಒಂದು ಅತ್ಯಂತ ಶಕ್ತಿಶಾಲಿಯಾದ ಮಾಧ್ಯಮ' ಎಂದು ಬಾಲಕೃಷ್ಣ ನಾಯ್ಕ್ ಹೇಳುತ್ತಾರೆ. ಇದನ್ನೇ 2500 ವರ್ಷಗಳ ಹಿಂದೆ ಗ್ರೀಕ್ ಥಿಯೇಟರ್ ಕೂಡಾ ಮಾಡಿದ್ದು, ಪಿ. ಲಂಕೇಶ್‌ರವರ ಕನ್ನಡ ರೂಪಾಂತರವನ್ನು ಓದಿದ ನನಗೆ ಈ ನಾಟಕ ಇಂದಿನ ನಮ್ಮ ದೇಶದ ಪರಿಸ್ಥಿತಿಗೆ ಎಷ್ಟೊಂದು ಪ್ರಸ್ತುತವಾಗಿದೆ ಎಂದು ಯೋಚಿಸುವಂತೆ ಮಾಡಿತು. ಅಮೆರಿಕಾ, ಯುರೋಪ್, ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಏಷ್ಯಾದಲ್ಲಿ ಹೀಗೆ ಪ್ರಪಂಚದಾದ್ಯಂತ ಇಂದಿಗೂ ಕೂಡಾ ಈ ನಾಟಕ ಪ್ರದರ್ಶನಗೊಳ್ಳುತ್ತಿದೆ. ಈ ಕಾರಣಕ್ಕಾಗಿಯೇ ನಾವು, ರಂಗಭೂಮಿಯಲ್ಲಿ ಉತ್ಸುಕತೆಯುಳ್ಳ ದೆಹಲಿಯ ಒಂದಿಷ್ಟು ಯುವಜನ, ಮಹತ್ವಾಕಾಂಕ್ಷೆಯ ಮತ್ತು ಮಹತ್ತರ ಸವಾಲಿನಂತಿರುವ ಈ ನಾಟಕವನ್ನು ಆರಿಸಿಕೊಂಡೆವು. ಈ ನಾಟಕ ಅಧಿಕಾರವನ್ನು ಪ್ರತಿಬಿಂಬಿಸುತ್ತದೆ. ಅಂತಿಗೊನೆಯ ನೈತಿಕ ಐಕ್ಯತೆ ಮತ್ತು ಧೈರ್ಯದ ಒಂದು ಗುರುತಾಗಿ ಈ ನಾಟಕ ಪ್ರದರ್ಶನಗೊಂಡ ಮೊದಲ ದಿನದಿಂದ ಇಂದಿನವರೆಗಿನ ಎಲ್ಲಾ ಪೀಳಿಗೆಯವರನ್ನು ಉತ್ತೇಜನಗೊಳಿಸುತ್ತಾ ಬಂದಿದೆ. ಈ ಪ್ರದರ್ಶನ ಶಕ್ತಿಯುತವಾದ ವಾದ ವಿವಾದಗಳುಳ್ಳ ಸಂಭಾಷಣೆಗಳೊಂದಿಗೆ ಎಲ್ಲವನ್ನು ಅಭಿವ್ಯಕ್ತಿಗೊಳಿಸುತ್ತದೆ. ಎಲ್ಲಾ ಪಾತ್ರಗಳು ಇಸ್ಮೇನೆ ಸೇರಿದಂತೆ (ವಿದ್ಯಾಭಟ್) ಹಯ್‌ಮೋನ್ (ಸಂತೋಷ್ ಹೊಸಹಳ್ಳಿ), ಕಾವಲುಗಾರ (ರಾಕೇಶ್ ಎನ್.ಎಸ್.), ದೂತ (ಸುಖೇಶ್ ಶೆಟ್ಟಿ), ಟೈರಿಸೀಯಸ್ (ಪುರುಷೋತ್ತಮ ಬಿಳಿಮಲೆ), ಪಾಲಿನ್ಯೆಕಸ್ (ರವಿ ಮೂಡಬಿದಿರೆ) ಮತ್ತು ಯೂರಿಡೀಸಿ (ಅನಿತಾ ನಾಯ್ಕ್) ತಮ್ಮ ಸಂಭಾಷಣೆ ಮತ್ತು ಅಭಿನಯದಿಂದ ಈ ವಿಚಾರದ ಮೇಲೆ ಬೆಳಕು ಚೆಲ್ಲಿದ್ದಾರೆ.

ರಾಜ ಕ್ರೆಯಾನ್‌ನ ಎರಡು ಜನ ಅಂಗ ರಕ್ಷಕರು (ಚಂದ್ರ ನಾಯ್ಕ್ ಮತ್ತು ಡಾ. ಅವನೀಂದ್ರನಾಥ್ ರಾವ್), ನಾಟಕದ ಆದಿಯಿಂದ ಅಂತ್ಯದವರೆಗೆ ಒಂದೇ ಭಂಗಿಯಲ್ಲಿ ನಿಂತು ತಮ್ಮ ಶರೀರದ ಮೇಲಿನ ನಿಯಂತ್ರಣವನ್ನು ಪ್ರದರ್ಶಿಸಿದ್ದಾರೆ. ಪ್ರಭಾವಶಾಲಿಯಾದ ಹಳೇ ಥೀಬ್ಸ್‌ನ ಹಿರಿಯರ ಮೇಳದ ಪ್ರದೀಪ್ ಕುಮಾರ್, ಪೂಜಾ ಪಿ. ರಾವ್, ಸವಿತಾ ನೆಲ್ಲಿ, ಚಿದಂಬರ ಕೋಟೆ, ರಾಘವ ಶರ್ಮಾ, ಕೆ.ಆರ್. ರಾಮಮೂರ್ತಿ ಮತ್ತು ಕೃಷ್ಣರಾಜ್ ನೆಲ್ಲಿ ಜಾದು ಪದಗಳನ್ನು ಅತ್ಯಂತ ಮಾರ್ಮಿಕವಾಗಿ ಹಾಡಿ ದುರಂತಕ್ಕೆ ಇನ್ನಷ್ಟು ಜೀವತುಂಬಿದ್ದಾರೆ. ಕಪ್ಪು ಬಿಳುಪಿನ ಸಮ್ಮಿಶ್ರದ ಉಡುಗೆ ತೊಡುಗೆಗಳ ಮೂಲಕ (ಸಾಯಿಪ್ರಶಾಂತಿ ಶೆಟ್ಟಿ ಮತ್ತು ಅಶ್ವಿತಾ ಶೆಟ್ಟಿ) ಸಭಿಕರನ್ನು ಪುರಾತನ ಥೀಬ್ಸ್‌ಗೆ ಕರೆದುಕೊಂಡು ಹೋಗಿದ್ದಾರೆ. ರಂಗಮಂಚದ ಮೇಲೆ ತಮ್ಮ ಕಲಾ ಕೌಶಲ್ಯದಿಂದ ಕೆ.ಎಸ್. ನಹುಷಾ ಮತ್ತು ಶರತ್ ಕುಮಾರ್ ಗ್ರೀಕ್ ನಗರದ ವಾತಾವರಣವನ್ನು ಸೃಷ್ಟಿಸಿದ್ದಾರೆ.

ಪ್ರಾರಂಭದಿಂದ ಕೊನೆಯವರೆಗೂ ನಾಟಕ ತುಂಬಾ ಗಂಭೀರ ಮತ್ತು ಶಿಸ್ತುಬದ್ಧವಾಗಿತ್ತು. ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆಯೇ ಪೊಲಿನಿಕಸ್‌ನ ಕೊಳೆಯುತ್ತಿರುವ ಶವ ಕಾಣುತ್ತಿತ್ತು, ಕೊನೆಯಲ್ಲಿ ಕ್ರೆಯಾನ್‌ನ ಅಂತ್ಯ ದುರಂತದಲ್ಲಿ ಮುಕ್ತಾಯಗೊಳ್ಳುತ್ತದೆ. 'ಹೆಮ್ಮೆಯು ವಿಧಿಯ ಹೊಡೆತಗಳಿಂದ ಶಿಕ್ಷೆಗೊಳಗಾಗುತ್ತದೆ' ಎಂಬ ಮೇಳದ ಒಂದು ಕಟ್ಟೆಚ್ಚರಿಕೆ ಸಭಾಂಗಣದಲ್ಲಿ ಪ್ರತಿಧ್ವನಿಸಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಅ

***ಅಭಿಮತ ವರದಿ***







## ಓದುಗರ ಪತ್ರ




ಅಭಿಮತದ ಸೆಪ್ಟೆಂಬರ್ ಸಂಚಿಕೆ ಭಲೇ ಅನ್ನಿಸಿದುದು ನಿಜ. ಮುಖಪುಟ ಈ ರೀತಿ ಆವಿಷ್ಕಾರಗೊಂಡುದು ಇದಕ್ಕೆ ಕಾರಣವೆಂದರೆ ತಪ್ಪಾಗಲಾರದು. ಮಹಿಳಾ ಮಣಿಗಳ ಗಹಣವೆ ಹೇರಿಕೊಂಡುದಲ್ಲದೆ, ರಾಜಕೀಯ ಹಿರಿಯ ಮುಸ್ಸದ್ದಿಗಳ ಪೂರಕವು ಸ್ಮಾರಕಯೊಂದರ ಅಡಿಪಾಯದಂತೆ ಸೇರಿಕೊಂಡಿತು. ಸಂಭ್ರಮ ನೀಡಿತು. ಹೊರ ಆವರಣ ಈ ರೀತಿ ವೈಶಿಷ್ಟ್ಯತೆಗಳಿಗೆ ಸಂಕೇತ ಅನ್ನಿಸಿದರೆ, ಅಗಲಿ ಹೋದ ಇಬ್ಬರು ಸಾಹಿತಿಗಳ ಫಲಕಗಳೆರಡನ್ನು ಅಲಂಕರಿಸಿಕೊಂಡ ಒಳಾವರಣವು ಪತ್ರಿಕೆಯ ಹೊಳಪಿಗೆ ಕಾರಣ ಅನ್ನಿಸಿದವು. ಶತ ಆಯುಷ್ಯ ಪೂರೈಸಿ ಒಂದಂಕೆ ಏರಿಸಿಕೊಳ್ಳುವ ತರಾತುರಿಯಲ್ಲಿ ವಿಧಿಯೆಡೆಗೆ ಶಿರಭಾಗಿದ ಕವಿ ಕೈಯಾರ ಕಿಂಞ್ಞಣ್ಣ ರೈ ಒಬ್ಬರಾದರೆ ನೇರನುಡಿಯ ಸಾಹಿತಿ ಸಂಶೋಧಕ ಎಲ್ಲವೂ ಆದ ಡಾ. ಎಂ.ಎಂ. ಕಲಬುರ್ಗಿ ಅವರು ಇನ್ನೊಬ್ಬರು. ಇದಲ್ಲದೆ ಮಾಯಾಪ್ರಪಂಚದ ವೈಕರಿ ಎನ್ನಿಸಿ ವಿಧಿ ನಿಯಮಕ್ಕೆ ಶರಣೆಂಬೆನಯ್ಯ ಅನ್ನುವಂತೆ ಆಗಿ ಹೋಗಿದೆ. ಅಭಿಮತದ ಕನ್ನಡ ಅಭಿಮಾನಿಗಳಿಗೆ ತುಂಬು ಹೃದಯದ ಕೃತಜ್ಞತಾ ಸಮರ್ಪಣೆಗಳು. ಅ

*ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ*
*ಕಾಸರಗೋಡು*

## ಕನ್ನಡ ರಾಜ್ಯೋತ್ಸವ ವೈಭವ !

ಕನ್ನಡ ನಾಡು–ನುಡಿ, ನೆಲ–ಜಲ, ಕಲೆ–ಸಂಸ್ಕೃತಿ
ಸಹಸ್ರಾರು ವರ್ಷಗಳ ಪುರಾತನ ಶಾಸನ, ಲಿಪಿ
ಅದ್ದೂರಿಯ ವೈಭವದ ರಾಜಮಹಾರಾಜರ ಆಳ್ವಿಕೆ
ಸಂಗೀತ, ನೃತ್ಯ, ನಾಟಕ, ಸಾಹಿತ್ಯ, ಜಾನಪದ ಪರಂಪರೆ
ಅದ್ವಿತೀಯ ವಿಶ್ವಮಾನ್ಯ ಅತ್ಯಮೂಲ್ಯ ಸಿರಿಸಂಪತ್ತು
ಅರುವತ್ತು ವರುಷಗಳ ಹೊಸ ಕರ್ನಾಟಕದ ನಾಡಿನಲಿ
ಇಂದೇನೋ ತಳಮಳ, ಕೋಲಾಹಲ, ಅಪಸ್ವರ
ಜಾತಿ–ಮತ, ಪ್ರಾದೇಶಿಕ, ಪ್ರಾಂತೀಯ ಅಸಮಾಧಾನತೆ
ಕೊಡು ಕೊಳ್ಳುವಿಕೆಯಲಿ, ಹಂಚುವಿಕೆಯಲಿ ತಾರತಮ್ಯ
ಭಾಷೆ ಬಳಲುತಿದೆ, ಸಾಹಿತ್ಯ ಬಡವಾಗುತ್ತಿದೆ, ವಿಚಾರ
ಸ್ವಾತಂತ್ರ್ಯಕ್ಕೆ ಎಲ್ಲೋ ಕುತ್ತು ಬಂದಂತೆ, ಅಲ್ಲಲ್ಲಿ ಭಯದ
ವಾತಾವರಣ ಏನೂ ಆಗದಂತೆ ಸುಮ್ಮನಿರುವ ಮೌನ
ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಟ್ಟ
ಕನ್ನಡ ಸಂಸ್ಕೃತಿಯ ವೈಭವ ಎಲ್ಲೋ ಮರೆಯಾದಂತೆ
ಮಸಿಯಾದಂತೆ, ಪುಟಾಣಿ ಕನ್ನಡದ ಕಂದಮ್ಮಗಳೂ
ಕೂಡಾ, ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಎ.ಬಿ.ಸಿ.ಡಿ.ಯ
ಅಡಿಯಲ್ಲಿ ದಬ್ಬಿಕೊಂಡು ಕನ್ನಡದ 'ಕ' ಮರೆತು
ಮಮ್ಮಿ, ಡ್ಯಾಡಿ ಕಲ್ಚರಿನಲಿ ಮೊಬೈಲ್ ಫೋನು,
ವಾಟ್ಸಫ್, ಟ್ವಿಟ್ಟರ್ ಸೋಶಿಯಲ್ ಮೀಡಿಯಾದ ಸುಂಟರ
ಗಾಳಿಯಲಿ ಕೊಚ್ಚಿ ಹೋಗುತ್ತಿರುವ ಭೀಕರ ದೃಶ್ಯ, ನೀರು–ನೆಲ
ಭಾಷೆಯ ಹೋರಾಟ ನಡೆಯುತ್ತಲೇ ಇದೆ
ನಿರಂತರವಾಗಿ ಮರದ ಮೇಲಿರುವವರಿಗೊಂದು ನೀತಿ
ಕೆಳಗಿನವರಿಗೆ ಇನ್ನೊಂದು ನೀತಿ, ಬಾರಿ ಅವಸರ
ಆ ಕಡೆ ಈ ಕಡೆ ನೋಡಲು ಸಮಯವಿಲ್ಲ ಬಾಹ್ಯ
ಭಾಷೆಗಳ ಧಾರಕಾರ ಹೊಳೆ ನೂತನ ಜನಾಂಗಕ್ಕೆ ಕನ್ನಡ
ಕೇವಲ ಕನ್ನಡಿಯ ಗಂಟಾಗದಿರಲಿ ಎಂಬುದೇ ಕಳಕಳಿ.

*ಸಖಾರಾಮ ಉಪ್ಪೂರು*

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Nov-2015, Vol. No.26, Issue No.2, Price Rs.1/- RNI Regn. No. 53405/91, DL-SW-1/4016/13-15
Printout Date : Nov 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

